ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 50 ಡಿಸೆಂಬರ್ 19, 1982 ಬೆಲೆ 60 ಪೈಸೆ

ಸಿ.ಪಿ.ಐ. (ಎಂ) ಉಮೇದ್ವಾರರು :

1) ಕಾಂ। ಪಿ. ರಾಮಚಂದ್ರರಾವ್ - ಉಳ್ಳಾಲ ಕ್ಷೇತ್ರ (ದ.ಕ.)

2) ಕಾಂ। ಎಸ್. ಸೂರ್ಯನಾರಾಯಣರಾವ್—ವರ್ತೂರು ಕ್ಷೇತ್ರ (ಬೆಂಗಳೂರು ಜಿಲ್ಲೆ)

3) ಕಾಂ। ಟಿ. ಎಸ್. ಮಣಿ—ಕೆ.ಜಿ ಎಫ್. ಕ್ಷೇತ್ರ (ಮೀಸಲು) ಕೋಲಾರ ಜಿಲ್ಲೆ

4) ಕಾಂ: ಎ ವಿ. ಅಪ್ಪುಸ್ವಾಮಿ ರೆಡ್ಡಿ - ಬಾಗೇಪಲ್ಲಿ ,,

ಹಾಗೂ

5) ಶ್ರೀ ಆರ್. ವೆಂಕಟರಾಮಯ್ಯ ಮುಳಬಾಗಲು

(ವಿರೋಧ ಪಕ್ಷಗಳ ಬೆಂಬಲಿತ ಅಭ್ಯರ್ಥಿ)

ಇವರೆಲ್ಲರ ಯಶಸ್ವಿಗಾಗಿ ದುಡಿಯಬೇಕೆಂದು ನಮ್ಮ ಕಳಕಳಿಯ ಮನವಿ

ಚುನಾವಣಾ ರಂಗ

ಕಾಂಗೈಯನ್ನು ಸೋಲಿಸಿರಿ — ೪ ಪಕ್ಷಗಳ ಅಭ್ಯರ್ಥಿಗಳನ್ನು ಆರಿಸಿರಿ

ಕರ್ನಾಟಕ ರಾಜ್ಯದ ವಿಧಾನಸಭೆಯ ಏಳನೇ ಚುನಾವಣೆಗೆ ನಾಮಪತ್ರ ಸಲ್ಲಿಸಿದವರೆಲ್ಲ ತಮ್ಮ ನಾಮಪತ್ರಗಳನ್ನು ಹಿಂದೆಗೆಯುವ ಕೊನೆಯ ತಾರೀಕು 15 ರಂದು ಮುಗಿಯಿತು. ಪ್ರತಿಯೊಂದು ಕ್ಷೇತ್ರದಲ್ಲಿ ಸ್ಪರ್ಧೆ ನಡೆಯುವ ಸ್ಪಷ್ಟ ಚಿತ್ರ ಕಾಣಬಹುದಾಗಿದೆ. ಜನತಾ ಪಕ್ಷ, ಕ್ರಾಂತಿರಂಗ, ಭಾರತ ಕಮ್ಯೂನಿಸ್ಟ್ ಪಕ್ಷ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳು ತಾವು ಈ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಬೆಂಬಲಿಗರ ಮತಗಳು ಹರಿದು ಹಂಚಿ ಹೋಗಿ ಇಂದಿರಾ ಕಾಂಗ್ರೆಸ್ ಪಕ್ಷ ಅಲ್ಪ ಬಹುಮತದಿಂದ ಗೆದ್ದು ಬರುವ ಅವಕಾಶ ಒದಗಿಸಿಕೊಡಬಾರದೆಂದು ದೃಢ ನಿರ್ಧಾರಮಾಡಿ, ಸ್ಪಷ್ಟ ತಿಳುವಳಿಕೆಯಿಂದ ತಮ್ಮ ಮತ ಕ್ಷೇತ್ರಗಳನ್ನು ಆಯ್ದುಕೊಂಡು ಉಮೇದುವಾರರನ್ನು ನಿಲ್ಲಿಸಿವೆ. ಆದರೆ ಕ್ರಾಂತಿರಂಗ ತನಗೆ ಮೀಸಲಾಗಿಟ್ಟ ಹೊಸಪೇಟೆ ಮೊದಲಾದ ಕೆಲವೆಡೆಗಳಲ್ಲಿ ತಮ್ಮ ಪಕ್ಷದ ಅಭ್ಯರ್ಥಿಯನ್ನು ನಿಲ್ಲಿಸುವಲ್ಲಿ ಸ್ವಲ್ಪ ಗೊಂದಲವಾಗಿ ಮೂರು-ನಾಲ್ಕು ಕಡೆ ಅಧಿಕೃತ ನಾಲ್ಕು ಪಕ್ಷಗಳ ಅಭ್ಯರ್ಥಿಗಳು ಇಲ್ಲದಂತಾದರೂ ಕೂಡ ಉಳಿದ ಕಡೆಗಳಲ್ಲೆಲ್ಲ ಪಕ್ಷದ ಆದೇಶವನ್ನು ಮುರಿದು ಚುನಾವಣೆಯಲ್ಲಿ ಸ್ಪರ್ಧಿಸಿರುವ ಘಟನೆ ಇಲ್ಲವೆಂದೇ ಹೇಳಬಹುದು. ಆದರೆ ಕಾಂಗೈಯಲ್ಲಿ ಮಾತ್ರ ಚುನಾವಣೆ ಘೋಷಣೆಯಾದ ದಿವಸದಿಂದ ಪ್ರಾರಂಭವಾದ ಉರಿ ಗುಂಡೂರಾಯರ – ಮಲ್ಲಣ್ಣನವರ ಬೆದರಿಕೆಗೂ ಬೆದರದೆ ಕಾಡ್ಗಿಚ್ಚಿನಂತೆ ಹಬ್ಬಿದೆ ಎಂಬುದು ಬೇರೆ ಬೇರೆ ಮತ ಕ್ಷೇತ್ರಗಳಲ್ಲಿ ಬಂಡುಖೋರ ಕಾಂಗೈ ಅಭ್ಯರ್ಥಿಗಳ ಸಂಖ್ಯೆಯಿಂದ ಗೊತ್ತಾಗುತ್ತದೆ. ಮಾಜಿ ಮಂತ್ರಿಗಳು, ಈಗಿರುವ ವಿಧಾನ ಸಭಾ ಸದಸ್ಯರು, ಹಾಗೆಯೇ ರಾಜ್ಯ ಮತ್ತು ಜಿಲ್ಲಾ ಮಟ್ಟದ ಹಲವಾರು ಮುಖಂಡರು ಸ್ವತಂತ್ರವಾಗಿ ಸ್ಪರ್ಧಿಸುತ್ತಿರುವುದನ್ನು ಕಾಣಬಹುದು. ಸ್ಪರ್ಧಿಗಳ ಆಯ್ಕೆ ಮಾಡುವ ಮುಂಚೆಯೇ ಈ ಸಲ ರಾಜ್ಯದಲ್ಲಿರುವ ಬಹುಸಂಖ್ಯ ಕೋಮುಗಳಾದ ಲಿಂಗಾಯಿತ-ಒಕ್ಕಲಿಗರಿಗೆ ಹೆಚ್ಚಿನ ಪ್ರಾತಿನಿಧ್ಯ



ಕುಡುಗೋಲು, ಸುತ್ತಿಗೆ, ನಕ್ಷತ್ರದ ಗುರುತಿಗೆ ನಿಮ್ಮ ಮತ ನೀಡಿ ।

ಕೊಡಲಾಗುವುದೆಂದು ಹೇಳಿ, ಅವರು ಕೊನೆಯ ಆಯ್ಕೆಯಲ್ಲಿ ತಮ್ಮ ಮಾತನ್ನು ಉಳಿಸಿಕೊಂಡಿರುವುದನ್ನು ಕಾಣಬಹುದು. ಆದರೆ ಕಾಂಗೈ ಪಕ್ಷದಲ್ಲಿ ಬಲವಾದ ಬಂಡಾಯ ಎದ್ದಿದೆ. ಹೈಕಮಾಂಡಿನ ಮತ್ತು ಮುಖ್ಯಮಂತ್ರಿಯವರ ತೀರ್ಮಾನವನ್ನೂ ತಿರಸ್ಕರಿಸಿ ಕಾಂಗ್ರೆಸ್ಸಿನವರು ಸ್ಪರ್ಧೆಗೆ ಇಳಿದಿದ್ದಾರೆಂದರೆ ಯಾರೂ ಆಶ್ಚರ್ಯಪಡುವ ಕಾರಣವಿಲ್ಲ. ಇಂಥ ಬೆದರಿಕೆ, ಆದೇಶಗಳ ಕಿಮ್ಮತ್ತು ಎಷ್ಟೆಂದು ಎಲ್ಲ ಕಾಂಗ್ರೆಸ್ಸಿನವರಿಗೆ ಗೊತ್ತು. ಅಧಿಕೃತ ಕಾಂಗೈ ಅಭ್ಯರ್ಥಿಯನ್ನು ಸೋಲಿಸಿ ಆರಿಸಿ ಬಂದ ಕೂಡಲೇ, ತಾವು ದುಂಬಾಲು ಬಿದ್ದು, ಕೈಜೋಡಿಸಿಕೊಂಡು "ನಾವೂ ತವರು ಮನೆಗೆ ಬರುತ್ತೇವೆ. ನಾವು ಮಾಡಿದ್ದೆಲ್ಲ ತಪ್ಪು, ಕ್ಷಮಿಸಬೇಕು'' ಎಂದು ಕೇಳುವ ಮುಂಚೆಯೇ ಶ್ರೀಮಾನ್ ಗುಂಡೂರಾರು "ಏನೂ ಅಭ್ಯಂತರ ಇಲ್ಲ, ನೀವೇನೂ ತಪ್ಪು ಮಾಡಿಲ್ಲ. ನಿಮ್ಮನ್ನೆಲ್ಲ ಆತ್ಮಾನಂದದಿಂದ ನಿಮ್ಮದೇ ಆದ ಮನೆಗೆ ಸ್ವಾಗತಿಸುತ್ತೇವೆ, ಎಲ್ಲರೂ ಬನ್ನಿ" ಎಂದು ತಾವೇ ಕೈ ಮುಂದೆ ಮಾಡಿ ಬೆನ್ನುಚಪ್ಪರಿಸಿ ಪಾರ್ಟಿಯೊಳಗೆ ಕರೆಸಿಕೊಳ್ಳುತ್ತಾರಷ್ಟೆ ಅಲ್ಲ, ಮಂತ್ರಿಮಂಡಲದಲ್ಲೂ ಸ್ಥಾನಕೊಡುತ್ತಾರೆ ಎಂಬ ಧೈರ್ಯ ಈ ಜನರಲ್ಲಿರುವುದರಿಂದಲೇ ನಿರ್ಭಯದಿಂದ ಸ್ಪರ್ಧಿಸುತ್ತಿದ್ದಾರೆ. ಇವರೆಲ್ಲ ಹೊರಬೇಕಾದ್ದು ಒಂದೇ ಹಾನಿ. ಅದೇನೆಂದರೆ ತಾ. 14 ರಂದು ಗುಂಡೂರಾಯರು ಪ್ರತಿಯೊಬ್ಬ ಸ್ಪರ್ಧಿಗೆ ರೂ. 2 ಲಕ್ಷದಂತೆ ಹಣ ಕೊಟ್ಟಿದ್ದಾರೆಂಬ ಸುದ್ದಿ ದಟ್ಟವಾಗಿ ಹಬ್ಬಿದೆ. ಅಷ್ಟೇ ಅಲ್ಲದೆ, ಕಾರು-ಜೀಪುಗಳ ವ್ಯವಸ್ಥೆಯನ್ನೂ ಮಾಡಲಾಗುವುದೆಂದು ಹೇಳಿದ್ದಾರಂತೆ. ಇದು ಮಾಮೂಲು. ಸ್ವತಂತ್ರರಾಗಿ ಸ್ಪರ್ಧಿಸುವವರು ಈ ದೇಣಿಗೆಯನ್ನು ಕಳೆದು

(8ನೇ ಪುಟ ನೋಡಿ)

ಸಂಪಾದಕೀಯ

ಎರಡು ನಾಲಿಗೆಯ ಇಂದಿರಾ

"ಪ್ರಾದೇಶಿಕ ಪಕ್ಷಗಳು, ಪ್ರಾದೇಶಿಕವಾದಗಳೆಲ್ಲ ದೇಶದ ಐಕ್ಯತೆಗೆ ಅಪಾಯಕಾರಿ" ಈ ಮಾತನ್ನು ನುಡಿದವರು ಇಂದಿರಾ ಗಾಂಧಿ. ಕೇರಳದಲ್ಲಿ ಅಂತೋನಿ ಕಾಂಗ್ರೆಸ್ಸನ್ನು ಕಾಂಗೈಯಲ್ಲಿ ವಿಲೀನಗೊಳಿಸುವ ಸಮಾವೇಶದಲ್ಲಿ ತಮಿಳುನಾಡಿನಲ್ಲಿ ಎ.ಐ ಡಿ.ಎಂ.ಕೆ., ಡಿ.ಎಂ.ಕೆ.ಗಳು, ಕಾಶ್ಮೀರದಲ್ಲಿ ದಿ. ಶೇಖ್ ಅಬ್ದುಲ್ಲಾರವರ ನ್ಯಾಶನಲ್ ಪಾರ್ಟಿಗಳು ಪ್ರಾದೇಶಿಕ ಪಾರ್ಟಿಗಳು, ತನಗೆ ಬೆಂಬಲಬೇಕಾದಾಗ, ತನ್ನ ಬೇಳೆ ಬೇಯಿಸಿಕೊಳ್ಳಲು ಇಂದಿರಾ ಗಾಂಧಿ ಈ ಪ್ರಾದೇಶಿಕ ಪಾರ್ಟಿಗಳ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಹೋದ ಚುನಾವಣೆಯಲ್ಲಿ ಡಿ.ಎಂ.ಕೆ. ಜೊತೆಯಲ್ಲಿ ಚುನಾವಣಾ ಒಪ್ಪಂದವಾಗಿತ್ತು. ಕೆಲವು ಕಾಲ ದಿ. ಶೇಖ್ ಅಬ್ದುಲ್ಲಾರವರ ಜೊತೆಯಲ್ಲೂ ಯಾವ ತೊಂದರೆ ಇಲ್ಲದೆ ಗೆಳೆತನ ಇತ್ತು. ಈಗ ಬಿಸಿ ಸುದ್ದಿ ಯಾವುದೆಂದರೆ ತ್ರಿಪುರಾದಲ್ಲಿ ಬಲಿಷ್ಠವಾಗಿ ಬೇರೂರಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಎಡರಂಗವನ್ನು ಈಗ ನಡೆಯುವ ಚುನಾವಣೆಯಲ್ಲಿ ಹೇಗಾದರೂ ಮಾಡಿ ಸೋಲಿಸಬೇಕೆಂಬ ದುರ್ಬುದ್ಧಿಯಿಂದ, ತ್ರಿಪುರಾದಲ್ಲಿ ಪ್ರತ್ಯೇಕತಾವಾದದ ಸಲುವಾಗಿ ಅಮೇರಿಕದ ಸಾಮ್ರಾಜ್ಯಶಾಹಿಗಳ ಹಣದ ಬೆಂಬಲದಿಂದ ಗೊಂದಲ ಎಬ್ಬಿಸುತ್ತಿರುವ ತ್ರಿಪುರಾ ಉಪಜಾತಿ ಸುಬಾ ಸಮಿತಿಯೊಡನೆ ಇಂದಿರಾ ಗಾಂಧಿ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಇದರರ್ಥವೇನು ?

ಆಟದಲ್ಲಿ ತಾನು ಗೆದಿಯುವ ಸಲುವಾಗಿ ವಿಚ್ಛಿದ್ರಕಾರಿ ಶಕ್ತಿಗಳೊಡನೆ, ಪ್ರಾದೇಶಿಕ ಪಕ್ಷಗಳೊಡನೆ ಎಂಥ ಪ್ರೇಮಸಲ್ಲಾಪದಲ್ಲಿ ಮುಳುಗಲೂ ಇಂದಿರಾ ಗಾಂಧಿ ತಯಾರಿದ್ದಾರೆ. ಆದರೆ ತನ್ನನ್ನು ವಿರೋಧಿಸುತ್ತಿರುವ ತೆಲುಗು ದೇಶಂ, ಕರ್ನಾಟಕ ಕ್ರಾಂತಿರಂಗಗಳೆಲ್ಲ ಪ್ರಾದೇಶಿಕ ಪಕ್ಷಗಳು. ಇವು ದೇಶದ ಐಕ್ಯತೆಗೆ ಅಪಾಯಕಾರಿ. ವಾಹವ್ವಾ ! ಇಂದಿರಾ ಗಾಂಧಿಯವರೇ, ನಮ್ಮ ಜನಾಂಗ 1982 ಮುಗಿಸಿ 1983ರಲ್ಲಿ ಕಾಲಿಡುತ್ತಿದ್ದಾರೆ. ನಿಮ್ಮ ಸರ್ವಾಧಿಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ನಾಳೆ ನೀವೆ ತೆಲುಗು ದೇಶಂ ಮತ್ತು ಕ್ರಾಂತಿರಂಗಗಳು ಪ್ರಾದೇಶಿಕ ಪಕ್ಷಗಳಲ್ಲವೆಂದೇ ಹೇಳಬಹುದು. ಡಿ. ಎಂ. ಕೆ. ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವಾಗ, ತ್ರಿಪುರ ಉಪಜಾತಿ ಸುಬಾ ಸಮಿತಿ ಕೂಡ ಪ್ರೀತಿಮಾಡಿದಾಗ ಈ ಜಗತ್ತನ್ನೇ ಮರೆಯುತ್ತೀರಿ. ಜನರೆಲ್ಲ ಜಾಗೃತರಾಗಿದ್ದಾರೆ. ನಿಮ್ಮ ಸ್ವಾರ್ಥಕ್ಕಾಗಿ ನೀವು ಎರಡು ನಾಲಿಗೆಯಿಂದ ಮಾತಾಡುತ್ತಿದ್ದೀರೆಂದು ಜನರಿಗೆ ತಿಳಿಯ ಹತ್ತಿದೆ. ನೀವೇ ಪ್ರಾದೇಶಿಕ ಭಾವನೆ ಬೆಳೆಸುತ್ತಿದ್ದೀರಿ, ಪ್ರಾದೇಶಿಕ ಪಕ್ಷಗಳಿಗೆ ಬೆಂಬಲ ಕೊಡುತ್ತಿದ್ದೀರಿ, ಅವರ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದೀರಿ. ನಿಮ್ಮ ಈ ನಿಲುವು ನಿಮ್ಮ ಸ್ವಾರ್ಥ ಸಾಧನೆಗಾಗಿಯೇ ಇರುವುದೆಂದು ಜನತೆಗೆ ತಿಳಿದಿದೆ. ಕಾರಣ ಬೇರೆಯವರಿಗೆ ಬುದ್ಧಿ ಹೇಳುವ ಮುಂಚೆ ನಿಮ್ಮನ್ನು ನೀವೆ ಸುಧಾರಿಸಿಕೊಳ್ಳುವುದು ಒಳಿತು. ಇಲ್ಲವಾದರೆ ಜನರೇ ನಿಮಗೆ ಬುದ್ಧಿಕಲಿಸಬೇಕಾದೀತು.

ಸಿ. ಪಿ. ಐ. (ಎಂ), ಸಿ. ಪಿ. ಐ., ಜನತಾ ಮತ್ತು ಕ್ರಾಂತಿರಂಗ ಅಭ್ಯರ್ಥಿಗಳಿಗೆ ಮತ ನೀಡಿ

ಸರ್ವಾಧಿಕಾರಿ ಶಕ್ತಿಗಳನ್ನು ಹಿಮ್ಮೆಟ್ಟಿಸಿ—ಪ್ರಜಾಪ್ರಭುತ್ವ ಉಳಿಸಿ

ಕೆ. ಜಿ. ಎಫ್.

ಆರೋಕ್ಯದಾಸ್ ಅವರ ಕುಟುಂಬಕ್ಕೆ ಪರಿಹಾರ ನಿಧಿ

ಸಿ. ಎಂ. ಅರ್ಮುಗಂನ ಗೂಂಡಾಗಳ ಹಲ್ಲೆಯಿಂದ ಕೊಲೆಯಾದ ಕಾಂ। ಆರೋಕ್ಯದಾಸ್‌ಯವರ ಕುಟುಂಬಕ್ಕೆ ಪರಿಹಾರ ನಿಧಿ ಸಲ್ಲಿಸುವ ಮತ್ತು ಆರೋಕ್ಯದಾಸ್‌ಯವರ ಭಾವಚಿತ್ರ ಅನಾವರಣ ಮಾಡುವ ಕಾರ್ಯಕ್ರಮವು ನವೆಂಬರ್ 23ರಂದು ಕೆ.ಜಿ.ಎಫ್.ನಲ್ಲಿ ನಡೆಯಿತು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಂ। ಸೂರ್ಯನಾರಾಯಣರಾವ್ ವಹಿಸಿದ್ದರು. ಕಾಂ। ಟಿ. ಎಸ್. ಮಣಿಯವರು ಭಾವಚಿತ್ರವನ್ನು ಅನಾವರಣ ಮಾಡಿದರು. ಈ ಸಂದರ್ಭದಲ್ಲಿ 20,000 ರೂ.ಗಳನ್ನು ಆರೋಕ್ಯದಾಸ್‌ಯವರ ಧರ್ಮಪತ್ನಿಗೆ ಕೊಡಲಾಯಿತು. ಕಾರ್ಮಿಕ ಸಂಗಾತಿಗಳು ಬಟ್ಟೆ, ಪಾತ್ರೆ, ದವಸ ಇತ್ಯಾದಿಗಳನ್ನು ನೀಡಿದರು

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಸಿ.ಐ.ಟಿ.ಯು. ತಮಿಳ್ನಾಡು ಘಟಕದ ಮುಖಂಡ ಕಾಂ। ಹರಿಭಟ್ ಆಗಮಿಸಿದ್ದರು. ಸ್ಥಳೀಯ ಜನತಾ ಪಕ್ಷದ ಮತ್ತು ಡಿ.ಎಂ.ಕೆ. ಮುಖಂಡರೂ ಪಾಲ್ಗೊಂಡಿದ್ದರು. ಆರಂಭದಲ್ಲಿ ಕಾಂ। ಸೌರಿದಾಸ್ ಸ್ವಾಗತಿಸಿದರು.

ಕಾಂ। ಸೂರಿಯವರು ಮಾತನಾಡುತ್ತಾ, ಕಾಂ। ಆರೋಕ್ಯದಾಸ್‌ರವರಿಗೆ ಯೋಗ್ಯ ಶ್ರದ್ಧಾಂಜಲಿ ಎಂದರೆ ಸಂಘಟನೆಯನ್ನು ಬಲಪಡಿಸುವುದು ಎಂದರು. ಬರಲಿರುವ ಚುನಾವಣೆಯಲ್ಲಿ ಅರ್ಮುಗಂನ ಡಿಪಾಸಿಟ್ ಜಪ್ತಾಗುವಂತೆ ಮಾಡಬೇಕೆಂದು ಅವರು ತಿಳಿಸಿದರು.

ಬೆಂಗಳೂರು :

ಹೋರಾಟನಿರತ ಕಾರ್ಮಿಕರನ್ನು ಬೆಂಬಲಿಸಿ ಡಿ.ವೈ.ಎಫ್.ಐ., ಎಸ್ ಎಫ್.ಐ. ಘಟಕಗಳಿಂದ ಧರಣಾ

ಕಳೆದ ಆರು ತಿಂಗಳುಗಳಿಂದ ಹೋರಾಟದಲ್ಲಿರುವ ಬೆಂಗಳೂರಿನ 'ರಾವ್ ಇನ್ಸುಲೇಟರ್' ಕಾರ್ಮಿಕರನ್ನು ಬೆಂಬಲಿಸಿ ಡಿ.ವೈ.ಎಫ್.ಐ. ಮತ್ತು ಎಸ್.ಎಫ್.ಐ. ಜಿಲ್ಲಾ ಸಮಿತಿಗಳು 30-11-82 ರಂದು ಧರಣಿ ಸತ್ಯಾಗ್ರಹ ನಡೆಸಿವೆ.

ವೈಟ್ ಫೀಲ್ಡ್ ರಸ್ತೆಯಲ್ಲಿರುವ ರಾವ್ ಇನ್ಸುಲೇಟರ್‌ನ ಕಾರ್ಮಿಕರು ಅಕ್ರಮ ವಜಾ ಪ್ರತಿಭಟಿಸಿ ಹೋರಾಟದಲ್ಲಿದ್ದಾರೆ (ವಿವರ ವರದಿ ಈಗಾಗಲೇ ಐಕ್ಯರಂಗದಲ್ಲಿ ಪ್ರಕಟವಾಗಿದೆ). ಈ ಕಾರ್ಮಿಕರನ್ನು ಬೆಂಬಲಿಸಿ ಕೃಷ್ಣರಾಜಪುರ ವಿಭಾಗದ ಸಿ.ಐ.ಟಿ.ಯು. ನೇತೃತ್ವದ ಕಾರ್ಮಿಕ ಸಂಘಗಳು ನವೆಂಬರ್ 26 ರಿಂದ ರಾವ್ ಇನ್ಸುಲೇಟರ್ ಕಾರ್ಖಾನೆ ಎದುರು ಧರಣಿ ಸತ್ಯಾಗ್ರಹ ನಡೆಸಿವೆ.

ಕಾರ್ಮಿಕರ ಹೋರಾಟದ ಬೆಂಬಲಕ್ಕೆ ವಿದ್ಯಾರ್ಥಿ ಯುವಜನ ಸಂಘಟನೆಗಳು ಮುಂಬಂದದ್ದು ಸ್ತುತ್ಯಾರ್ಹ.

ಹರಿಹರ :

ಪಿಕೆಟಿಂಗ್ ಕಾರ್ಯಕ್ರಮ—200 ಜನರ ಬಂಧನ

ಮುಷ್ಕರವನ್ನು ಹಿಂತೆಗೆಯುವವರೆಗೆ ಮಾತುಕತೆ ಇಲ್ಲ– ಎಂಬ ಮೊಂಡುವಾದವನ್ನು ಹರಿಹರ ಪಾಲಿಫೈಬರ್ ಆಡಳಿತವರ್ಗ ಕೈಬಿಡದಿರುವುದಕ್ಕೆ ಪ್ರತಿಭಟಿಸಿ 8-12-82 ರಿಂದ 13-12-82ರವರೆಗೆ ಕಾರ್ಖಾನೆಯ ಮುಂಭಾಗದಲ್ಲಿ ಪಿಕೆಟಿಂಗ್ ಕಾರ್ಯಕ್ರಮ ನಡೆಯಿತು.


8-12-82 ರಂದು ನಡೆದ ಕಾರ್ಯಕ್ರಮದಲ್ಲಿ 200 ಜನರನ್ನು ಬಂಧಿಸಿ, ಬಿಡುಗಡೆ ಮಾಡಲಾಯಿತು

13-12-82 ರಂದು ನಡೆದ ಅಭೂತಪೂರ್ವ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ಹಳ್ಳಿಗಳ ಜನರು, ಕಾರ್ಮಿಕ ಕುಟುಂಬ ವರ್ಗದವರು, ಬೀಡಿ ಕಾರ್ಮಿಕರು ಪಾಲ್ಗೊಂಡಿದ್ದರು ಬೆಳಿಗ್ಗೆ 11 ಘಂಟೆಯಿಂದ ಕಾರ್ಖಾನೆ ಮುಂಭಾಗದಲ್ಲಿ ನಡೆದ ಪಿಕೆಟಿಂಗ್ ಕಾರ್ಯಕ್ರಮದ ಪರಿಣಾಮವಾಗಿ ಇದೀಗ ಆಡಳಿತವರ್ಗ ಮಾತುಕತೆಗೆ ಮುಂದೆ ಬಂದಿದೆ. ಕಾರಣ ಪಿಕೆಟಿಂಗ್ ಕಾರ್ಯಕ್ರಮ ಕೈಬಿಡಲಾಗಿದೆ. ನವೆಂಬರ್ 13 ರಂದು ಮೈಸೂರು ಕಿರ್ಲೋಸ್ಕರ್‌ನ ಸಹಸ್ರಾರು ಕಾರ್ಮಿಕರು ಮುಷ್ಕರ ನಿರತ ಪಾಲಿಫೈಬರ್ ಕಾರ್ಮಿಕರನ್ನು ಬೆಂಬಲಿಸಿ ಬೃಹತ್ ಮೆರವಣಿಗೆ ಹೊರಡಿಸಿದ್ದರು.

ಮಾವೂರು ಘಟಕ ಲಾಕೌಟ್

ಕೇರಳದ ಮಾವೂರಿನಲ್ಲಿರುವ ಫೈಬರ್ ಡಿವಿಜನ್‌ನಲ್ಲಿ 8-12-82 ರಿಂದ ಲಾಕೌಟ್ ಘೋಷಿಸಲಾಗಿದೆ. ಸುಮಾರು 1500 ಕಾರ್ಮಿಕರು ಕೆಲಸ ಮಾಡುತ್ತಿರುವ ಈ ಘಟಕವನ್ನು ಲಾಕೌಟ್ ಮಾಡಿ ಆಡಳಿತವರ್ಗ ತನ್ನ ದುರಹಂಕಾರವನ್ನು ಪ್ರದರ್ಶಿಸಿದೆ.

ಶ್ರದ್ಧಾಂಜಲಿ



ಕಾಂ। ಪ್ರಮೋದ್ ದಾಸ್ ಗುಪ್ತಾ

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಧಾರವಾಡ–ಬೆಳಗಾವಿ ಪ್ರಾದೇಶಿಕ ಸಮಿತಿಯು ಮಲಪ್ರಭಾ ಘಟಕವು ಸಭೆ ಸೇರಿ ಕಾಮ್ರೇಡ್ ದಾಸ್‌ಗುಪ್ತಾ ಅವರ ನಿಧನಕ್ಕೆ ಶೋಕ ವ್ಯಕ್ತಪಡಿಸಿತು.

ತುಮಕೂರಿನ ಬೀಡಿ ಕಾರ್ಮಿಕರ ಸಂಘದ ಈದ್ಗಾ ಮೊಹಲ್ಲಾ ಶಾಖೆಯು 30-11-82 ರಂದು ಸಭೆ ಸೇರಿ ಕಾಂ। ಪ್ರಮೋದ್ ದಾಸ್ ಗುಪ್ತಾರವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿತು. ಸಭೆಯನ್ನುದ್ದೇಶಿಸಿ ಕಾಂ। ವಜೀರ್, ರವೀಂದ್ರ ನಾಯ್ಕ ಮೊದಲಾದವರು ಮಾತನಾಡಿದರು.

ಚಿತ್ರದುರ್ಗ ಜಿಲ್ಲಾ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ 'ಪ್ರಾದೇಶಿಕ ಸಮಿತಿ ಹರಿಹರದಲ್ಲಿ ಸಭೆ ಸೇರಿ ಕಾಂ। ಪ್ರಮೋದ್ ದಾಸ್ ಗುಪ್ತಾರವರ ನಿಧನಕ್ಕೆ ದುಃಖ ವ್ಯಕ್ತಪಡಿಸಿತು.

ಡಿ. ವೈ. ಎಫ್. ಐ.ನ ಬೆಂಗಳೂರು ಜಿಲ್ಲಾ ಸಮಿತಿಯು ಕಾಂ। ಪ್ರಮೋದ್ ದಾಸ್ ಗುಪ್ತಾರವರ ನಿಧನಕ್ಕೆ ತನ್ನ ದುಃಖವನ್ನು ವ್ಯಕ್ತಪಡಿಸಿದೆ.

ಸಿ. ಪಿ. ಐ [ಎಂ] ಕುಂದಾಪುರ ತಾಲ್ಲೂಕು ಘಟಕವು 4-12-82 ರಂದು ಸಭೆ ಸೇರಿ ಕಾಂ। ಪ್ರಮೋದ್‌ರಿಗೆ ಶ್ರದ್ಧಾಂಜಲಿ ಸಲ್ಲಿಸಿದೆ.

ಬಿಜಾಪುರ ಜಿಲ್ಲಾ ರೈತ ಸಂಘ ಮತ್ತು ಸಿ. ಪಿ. ಐ (ಎಂ) ಘಟಕಗಳು 7-12-82 ರಂದು ಸಭೆ ಸೇರಿ ಕಾಂ। ಪಿ. ಡಿ. ಜಿ. ಯವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿವೆ.

ಐಕ್ಯರಂಗ

ಚಂದಾ ವಿವರ

ವಾರ್ಷಿಕ ಚಂದಾ	30 ರೂ.
ಅರ್ಧ ವಾರ್ಷಿಕ ಚಂದಾ	15 ರೂ.

ಪರಿಸರ

● ಜನತಂತ್ರದ ವ್ಯವಸ್ಥೆಯಲ್ಲಿ ಜನರ ಸಮಸ್ಯೆಗಳ ಮೇಲೆ ಬೆಳಕು ಬೀರಲು ಇರುವ ಒಂದು ಸದವಕಾಶವೆಂದರೆ ಚುನಾವಣೆ. ಇಂತಹ ಒಂದು ಸಂದರ್ಭದಲ್ಲಿ ರೈತ ಸಂಘ "ನಕಾರಾತ್ಮಕ" ನಿಲುವು ತಳೆದು ರೈತರ ಸಮಸ್ಯೆಗಳನ್ನು "ಕತ್ತಲೆ ಕೋಣೆಯಲ್ಲಿ ಕೂಡಿ ಹಾಕುವುದು ಅವಿವೇಕದ ವರ್ತನೆ" ಎಂಬುದು ಅನೇಕ ರೈತರ ಭಾವನೆ.

ರೈತ ವರ್ಗದ ಹಿತಕ್ಕೆ ಸಲ್ಲದ ರಾಜಕೀಯ ಶಕ್ತಿಗಳನ್ನು ಬಗ್ಗಿಸಲು ಅಥವಾ ಸಲ್ಲುವ ಶಕ್ತಿ–ವ್ಯಕ್ತಿಗಳನ್ನು ಒಲಿಸಿಕೊಳ್ಳಲು ಇರುವ ಅವಕಾಶ ಚುನಾವಣೆ. ರೈತರ ಸಮಸ್ಯೆಗಳೇನು ? ಅವುಗಳ ಪರಿಹಾರಕ್ಕೆ ರಾಜಕೀಯ ಪಕ್ಷಗಳು ಮಾಡಬೇಕಾದ ಕೆಲಸಗಳೇನೆಂಬುದನ್ನು ಎಲ್ಲರ ಮನ ಮುಟ್ಟುವಂತೆ ಗಟ್ಟಿಯಾಗಿ ಹೇಳಬೇಕಾದ ಈ ಸಂದರ್ಭದ ಬಾಯಿಗೆ ಬೀಗ ಹಾಕಿ ಕುಳಿತಿರಬೇಕೆಂಬ ನೀತಿಯ ಉದ್ದೇಶವೇನೆಂಬುದು ಯಾರಿಗೂ ಅರ್ಥವಾಗದಾಗಿದೆ.

ಇದುವರೆಗೆ ರೈತರ ಮತ ಪಡೆದು ವಿಧಾನಸಭೆಗೆ ಆಯ್ಕೆಯಾದ ಪ್ರತಿನಿಧಿಗಳು, ರೈತ ಸಮೂಹವನ್ನು ನಗರವಾಸಿಗಳ ಸೇವಕರಾಗಿ ಮಾಡಿದ ಆರ್ಥಿಕ ವ್ಯವಸ್ಥೆಗೆ ಹೊಂದಿಕೊಂಡು ರೈತರಿಗೆ ದ್ರೋಹ ಬಗೆದರೆಂಬುದು ರೈತ ಸಂಘದ ಆರೋಪ. ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗದಂತೆ ಮಾಡಿದ ಆರ್ಥಿಕ ವ್ಯವಸ್ಥೆಯ ಪರಿಪಾಲಕರಾದ ಇಂದಿನ ರಾಜಕಾರಣಿಗಳು ರೈತ ಸಂಘದ ಪಾಲಿಗೆ ತಿರಸ್ಕೃತರೆಂಬುದು ನಿಜವಾದರೂ ರೈತ ಹಿತದ ರಕ್ಷಕರನ್ನು ರಾಜಕೀಯದಲ್ಲಿ ಸೃಷ್ಟಿಸುವ ಕೆಲಸವನ್ನಾದರೂ ಚುನಾವಣಾ ಸಂದರ್ಭದಲ್ಲಿ ಮಾಡಬೇಕಿತ್ತಲ್ಲವೇ ? ಎಂಬುದು ಎಲ್ಲರೂ ಕೇಳುವ ಪ್ರಶ್ನೆ.

ಅನೇಕರಿಗೆ ಅರ್ಥವಾಗುವ ಒಂದು ವಿಚಾರವೆಂದರೆ ರೈತ ಸಂಘದ ನಾಯಕರು ಆಡುತ್ತಿರುವ ಚಳವಳಿಯ ಮಾತು. ಚಳವಳಿ ಎಂದ ಮೇಲೆ ಅದಕ್ಕೊಂದು ಉದ್ದೇಶವಿರಬೇಕು. ಏನಾದರೂ ಕಾರ್ಯಸಾಧನೆಯ ಸಂಕಲ್ಪವಿರಬೇಕು. ಗುರಿ ಈಡೇರಿಕೆಗೆ ಸಾಧಕವಾದ ಅವಕಾಶದ ಸದುಪಯೋಗ ಮಾಡಿಕೊಳ್ಳಬೇಕು. ಅವಕಾಶ ಬಂದಾಗ ಮನಸ್ಸಿನ ಬಾಗಿಲು ಮುಚ್ಚಿ ಕೂತಿರುವುದು ವಿವೇಕಿಗಳ ವರ್ತನೆಯಲ್ಲ.

"ಯಾವುದಾದರೊಂದು ಗುರಿ ಸಾಧನೆಯ ಉದ್ದೇಶ ರೈತ ಚಳವಳಿಗೆ ಇಲ್ಲವೆಂದಾದರೆ ಚಳವಳಿ ಯಾಕೆ ಮಾಡಬೇಕು ? ಜೈಲುವಾಸದ ಸಂಕಟ ಏಕೆ ಅನುಭವಿಸಬೇಕು ? ಪೋಲೀಸರ ಗುಂಡಿಗೆಯಾಕಾಗಿ ಬಲಿಯಾಗಬೇಕು ?" ಎಂದು ಹಾಸನ ಜಿಲ್ಲೆಯ ಯುವಕ ರೈತರೊಬ್ಬರು ಪ್ರಶ್ನಿಸುತ್ತಾರೆ.

ಚುನಾವಣೆ ಬಗ್ಗೆ ರೈತ ಸಂಘದ ನಾಯಕರ ನಕಾರಾತ್ಮಕ ನಿಲುವು ಅನೇಕ ಮಂದಿ ಯುವಕ ರೈತರನ್ನು ವ್ಯಗ್ರರನ್ನಾಗಿ ಮಾಡಿದೆ.

ರೈತ ಸಂಘದ ನಾಯಕರು ರೈತರನ್ನು ಇದುವರೆಗೆ ವಂಚಿಸುತ್ತ ಬಂದಿರುವ "ಚಿಲ್ಲರೆ ರಾಜಕಾರಣಿಗಳಿಗಿಂತ ತೀರಾ ಭಿನ್ನರಲ್ಲ" ಎಂಬ ತೀರ್ಮಾನಕ್ಕೆ ಈ ಯುವಕ ರೈತರು ಬರುತ್ತಿದ್ದಾರೆ.

ಸಲ್ಲದ ರಾಜಕಾರಣಿಗಳಿಗೆ ಪಾಠ ಕಲಿಸಿ ರಾಜ್ಯದ ರಾಜಕೀಯದಲ್ಲಿ ರೈತ ಶಕ್ತಿಯನ್ನು ಬೆಳೆಸಲು ಇದ್ದ ಚುನಾವಣಾ ಅವಕಾಶವನ್ನು ತಿರಸ್ಕರಿಸಿದ ಈ ರೈತ ಸಂಘದ ನಾಯಕರು ನಾಳೆ ಚಳವಳಿ ನಡೆಸಿ ಯಾವ ಪುರುಷಾರ್ಥ ಸಾಧಿಸಲಿದ್ದಾರೆ ? – ಎಂಬುದು ಪ್ರಶ್ನೆ.

ಈ ರೈತ ಪ್ರತಿನಿಧಿಗಳ ಭಾವನೆಯ ತೀವ್ರತೆಯನ್ನು ಗಮನಿಸಿದರೆ ಮಂಡ್ಯ ಮತ್ತು ಹಾಸನ ಜಿಲ್ಲೆಗಳ ರೈತರು ರೈತ ಸಂಘ ನಾಯಕರ ನಿಲುವನ್ನು ತಿರಸ್ಕರಿಸಿ ಚುನಾವಣಾ ಕಣದಲ್ಲಿ ಸಕ್ರಿಯ ಪಾತ್ರವಹಿಸುವುದು ಖಚಿತವಾಗಿ ಕಾಣುತ್ತಿದೆ. ನಾಯಕರ ಬಗ್ಗೆ ಇವರೀಗ ತೋರಿಸುತ್ತಿರುವ ಆಕ್ರೋಶ ನಾಳೆ ರೈತ ಸಂಘದ ಒಡಕಿಗೂ ಕಾರಣವಾಗಬಹುದು. ಅಥವಾ "ಅತಿ ಬುದ್ಧಿವಂತರೆಂದು ಭ್ರಮಿಸಿರುವ ಕೆಲವರು ಅವಿವೇಕಿ ನಾಯಕರನ್ನು ಕಿತ್ತು ಹಾಕುವ ಕೆಲಸ ನಡೆಯಬಹುದು.

— ರಘುರಾಮ ಶೆಟ್ಟಿ.

ಪ್ರಜಾವಾಣಿ 9-12-82.

[ರುದ್ರಪ್ಪನವರ ನೇತೃತ್ವದ ರೈತ ಸಂಘವು ಚುನಾವಣೆಯ ಬಗ್ಗೆ ತಳೆದ ನಿಲುವಿನ ಕುರಿತು]

ಪೊಲಿಟ್‌ಬ್ಯೂರೋ ಪತ್ರ :

ಚುನಾವಣೆ — ಜನತೆಯ ಮುಂದಿರುವ ಕರ್ತವ್ಯ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ತ್ರಿಪುರಾದಲ್ಲಿ ಮುಂಬರುವ ಜನವರಿ 5 ರಂದು ನಡೆಯಲಿರುವ ಚುನಾವಣೆಯಲ್ಲಿ, ಎಡರಂಗ ಮತ್ತಷ್ಟು ಶಕ್ತಿ ಪಡೆದು ಅಧಿಕಾರಕ್ಕೆ ಮರಳುವಂತೆ ಮಾಡಬೇಕೆಂದು ತ್ರಿಪುರಾದ ಜನತೆಗೆ ಕರೆ ನೀಡುತ್ತದೆ.

ಕರ್ನಾಟಕ ಹಾಗೂ ಆಂಧ್ರ ಪ್ರದೇಶದಲ್ಲಿ ಅದೇ ದಿನ ನಡೆಯಲಿರುವ ಚುನಾವಣೆಯಲ್ಲಿ ಆಳುವ ಕಾಂಗ್ರೆಸ್ (ಐ) ಭಾರೀ ಸೋಲನ್ನನುಭವಿಸುವಂತೆ ಮಾಡಬೇಕೆಂದು ಪೊಲಿಟ್‌ಬ್ಯೂರೋ ಕರ್ನಾಟಕ ಹಾಗೂ ಆಂಧ್ರ ಪ್ರದೇಶದ ಮತದಾರರನ್ನು ವಿನಂತಿಸಿಕೊಳ್ಳುತ್ತದೆ.

ತ್ರಿಪುರಾದಲ್ಲಿ ಜನವರಿ 5 ರಂದು ನಡೆಯಲಿರುವ ಚುನಾವಣೆಯು 1977 ರಲ್ಲಿ ಎಡರಂಗಕ್ಕೆ ಜನತೆ ನೀಡಿದುದಕ್ಕಿಂತಲೂ ಹೆಚ್ಚು ಶಕ್ತಿಶಾಲೀ ಅಧಿಕಾರ ಪಡೆದು ಜಯಶಾಲಿಯಾಗುವುದು ಮತ್ತು ಕರ್ನಾಟಕ ಹಾಗೂ ಆಂಧ್ರ ಪ್ರದೇಶದಲ್ಲಿ ಕಾಂಗ್ರೆಸ್ (ಐ) ಪರಾಭವ ಹೊಂದುವುದು ಇವೆರಡೂ ಕೇಂದ್ರ ಸರಕಾರದಿಂದ ಸತತ ಹಲ್ಲೆಗೊಳಗಾಗಿರುವ ಸಂಸದೀಯ ಪ್ರಜಾಪ್ರಭುತ್ವ ಹಾಗೂ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸುವ ಹೋರಾಟವನ್ನು ಮುನ್ನಡೆಸಲು ಅತೀ ಅಗತ್ಯ.

ನಾಲ್ಕು ರಾಜ್ಯಗಳಲ್ಲಿ ಕಳೆದ ಮೇ 19 ರಂದು ಚುನಾವಣೆ ನಡೆದ ಎಂಟು ತಿಂಗಳೊಳಗೇ ಈ ಮೂರು ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿದೆ. ಆ ಚುನಾವಣೆಯಲ್ಲಿ ಹರಿಯಾಣಾದಲ್ಲಿ ಕಾಂಗ್ರೆಸ್ (ಐ) ಅಲ್ಪ ಸಂಖ್ಯೆಯ ಸ್ಥಾನಗಳನ್ನು ಪಡೆದಿದ್ದರೂ ಕೇಂದ್ರದಲ್ಲಿರುವ ಆಳುವ ಪಕ್ಷ ರಾಜ್ಯದಲ್ಲಿ ತಾನು ನೇಮಿಸಿದ ರಾಜ್ಯಪಾಲ ಅಧಿಕಾರಗಳ ದುರುಪಯೋಗ ನಡೆಸಿ, ಲಂಚ ಹಾಗೂ ಬೆದರಿಕೆಯಂತಹ ತೀವ್ರ ಖಂಡನಾರ್ಹ ವಿಧಾನಗಳ ಮೂಲಕ ಕಾಂಗ್ರೆಸ್ (ಐ) ನ್ನು ಅಧಿಕಾರದಲ್ಲಿ ಕಳ್ಳತನದಿಂದ ಕೂರಿಸಿತು. ಈ ರೀತಿ ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಕೆಲಸ ಈಗ ದೇಶದ ಮೇಲೆ ಸರ್ವಾಧಿಕಾರೀ ಆಳ್ವಿಕೆ ಹೇರುವ ಇಂದಿರಾ ಗಾಂಧಿಯವರ ಕಾಂಗ್ರೆಸ್ (ಐ) ಪ್ರಯತ್ನದ ಅನಿವಾರ್ಯ ಅಂಗವಾಗಿದೆ.

ಸರ್ವಾಧಿಕಾರ ಹೇರುವ ಪ್ರಯತ್ನ, ಜನತೆಯ ಎಲ್ಲಾ ಪ್ರಜಾಪ್ರಭುತ್ವ ಹಕ್ಕುಗಳ ದಮನ ಇವು ಆಳುವ ಕಾಂಗ್ರೆಸ್ (ಐ) ಕೈಗೊಂಡ ಇನ್ನೂ ಹಲವು ಕ್ರಮಗಳಿಂದ ವ್ಯಕ್ತವಾಗಿದೆ. ಪತ್ರಿಕಾ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಹತ್ತಿಕ್ಕುವ ಬಿಹಾರ ಪತ್ರಿಕಾ ಮಸೂದೆ ಇದಕ್ಕೆ ಅತೀ ಸ್ಪಷ್ಟ ಉದಾಹರಣೆ. ಇದರೊಂದಿಗೇ ಕೈಗಾರಿಕಾ ವಿವಾದ (ತಿದ್ದುಪಡಿ) ಕಾನೂನು ಇತ್ಯಾದಿ ಕಾರ್ಮಿಕ ವರ್ಗ ವಿರೋಧೀ ಶಾಸನಗಳ ಮೂಲಕ ಕಷ್ಟಪಟ್ಟು ಸಾಧಿಸಿದ ಕಾರ್ಮಿಕರ ಮತ್ತು ನೌಕರರ ಸಂಘಟನೆಯ, ಸಾಮೂಹಿಕ ಚೌಕಾಸಿಯ ಹಾಗೂ ಮುಷ್ಕರದ ಹಕ್ಕುಗಳನ್ನು ದಮನಮಾಡಲು ಯತ್ನಿಸಲಾಗುತ್ತಿದೆ. ಈ ಕರಾಳ ಶಾಸನಗಳಿಗಿಂತ ಮೊದಲು ಈಗಾಗಲೇ ನಿವಾರಕ ಬಂಧನಕ್ಕಾಗಿ ರಾಷ್ಟ್ರೀಯ ಭದ್ರತಾ ಶಾಸನ ಹಾಗೂ ಕಾರ್ಮಿಕ ವರ್ಗದ ವಿರುದ್ಧ ಅವಶ್ಯಕ ಸೇವಾ ನಿರ್ವಹಣಾ ಶಾಸನ ಜ್ಯಾರಿಗೆ ಬಂದಿವೆ. ಆದ್ದರಿಂದ ಜನವರಿ 5 ರಂದು ಮೂರು ರಾಜ್ಯಗಳಲ್ಲಿ ನಡೆಯುವ ಚುನಾವಣೆ ಸರ್ವಾಧಿಕಾರೀ ಶಕ್ತಿಗಳಿಗೆ ಅತ್ಯಂತ ಪ್ರಬಲವಾದ ಪ್ರತಿಭಟನೆ ವ್ಯಕ್ತಪಡಿಸಲು ಹಾಗೂ ಸಂಸದೀಯ ಪ್ರಜಾಪ್ರಭುತ್ವ ಮತ್ತು ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ದೃಢಸಂಕಲ್ಪ ಕೈಗೊಳ್ಳಲು ಅವಕಾಶ ಒದಗಿಸಿಕೊಟ್ಟಿದೆ. ಈ ಬಹುಮುಖ್ಯವಾದ ಉದ್ದೇಶ ಸಾಧನೆಯಾಗುವಂತೆ ತಮ್ಮ ಮತ ಚಲಾಯಿಸಬೇಕೆಂದು ಪೊಲಿಟ್‌ಬ್ಯೂರೋ ಈ ಮೂರು ರಾಜ್ಯಗಳ ಜನತೆಗೆ ಮನವಿ ಮಾಡುತ್ತದೆ.

ಸ್ವಾತಂತ್ರ್ಯಾನಂತರದ 35 ವರ್ಷಗಳಲ್ಲಿ ಜಮೀನುದಾರೀ ಹಾಗೂ ವಿದೇಶೀ ಗುತ್ತೇದಾರಿ ಬಂಡವಾಳದೊಡನೆ ಕೈಮಿಲಾಯಿಸಿ ಬೂರ್ಜ್ವಾ-ಭೂಮಾಲಿಕ ಆಳುವ ವರ್ಗಗಳು ಬಂಡವಾಳಶಾಹಿಯನ್ನು ಕಟ್ಟುವ ದಿವಾಳಿಕೋರ ನೀತಿ ಅನುಸರಿಸಿದುದನ್ನು ಕಂಡಿದ್ದೇವೆ. ಕೇಂದ್ರದಲ್ಲಿ ಅಧಿಕಾರದಲ್ಲಿದ್ದವರು ಅನುಸರಿಸಿದ ಆರ್ಥಿಕ ನೀತಿಗಳ ವಿನಾಶಕಾರೀ ಪರಿಣಾಮವನ್ನು ಜನತೆ ಇಂದಿನಷ್ಟು ತೀವ್ರವಾಗಿ ಹಿಂದೆಂದೂ ಅನುಭವಿಸಿಲ್ಲ. ಬೆಲೆಗಳು ಗಗನದಲ್ಲಿವೆ; ಕೆಲವೇ ನಗರಗಳಲ್ಲಿ ದಾಖಲಾಗಿರುವ ನಿರುದ್ಯೋಗಿಗಳ ಸಂಖ್ಯೆ 1 ಕೋಟಿ 80 ಲಕ್ಷವನ್ನು ಮೀರಿದೆ; ದೇಶದ ಅರ್ಧದಷ್ಟು ಜನ ಬಡತನದ ರೇಖೆಯ ಕೆಳಗೇ ಜೀವಿಸುತ್ತಿದ್ದಾರೆ. ಏರುತ್ತಿರುವ ಬೆಲೆಗಳನ್ನು ಹತೋಟಿಯಲ್ಲಿಡಲು ಏನೂ ಕ್ರಮ ಕೈಗೊಳ್ಳದೇನೇ ಕಾರ್ಮಿಕರು ಹಾಗೂ ನೌಕರರ ಮೇಲೆ ವೇತನ ಸ್ತಂಭನವನ್ನು ಹೇರಲು ಈ ಆಳರಸರು ಪ್ರಯತ್ನಿಸುತ್ತಿದ್ದಾರೆ. ತಮ್ಮ ಬೆಳೆಗಳಿಗೆ ತಕ್ಕ ಯೋಗ್ಯ ಬೆಲೆ ಪಡೆಯದೆ ರೈತರು ನಿರ್ಗತಿಕರಾಗುತ್ತಿದ್ದಾರೆ, ಜಮೀನು ಕಳೆಕೊಳ್ಳುತ್ತಿದ್ದಾರೆ. ಆ ಮೂಲಕ ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚುತ್ತಿದೆ. ಕೃಷಿ ಕೂಲಿಕಾರರಿಗೂ ವರ್ಷವಿಡೀ ಉದ್ಯೋಗ ಸಿಗುವುದಿಲ್ಲ. ಕಷ್ಟಪಟ್ಟು ಜೀವಿಸಿರಲು ಸಾಲುವಷ್ಟೂ ಕೂಲಿ ಸಿಗುತ್ತಿಲ್ಲ. ಪ್ರಧಾನ ಮಂತ್ರಿಯವರು ಮತ್ತೆ ತನ್ನ ಹೊಸ ಇಪ್ಪತ್ತಂಶದ ಕಾರ್ಯಕ್ರಮದ ತುತ್ತೂರಿ ಊದುತ್ತಿದ್ದಾರೆ. ಆದರೆ ಭೂಸುಧಾರಣೆಯಂತಹ ಬಹು ಪ್ರಾಮುಖ್ಯದ ವಿಷಯಗಳಲ್ಲಿ ಆಳುವ ಪಕ್ಷದ ಹೇಳಿಕೆ ಸಂಪೂರ್ಣ ಜೊಳ್ಳು. ಪಶ್ಚಿಮ ಬಂಗಾಳ ಹಾಗೂ ಕೇರಳದ ಭೂಸುಧಾರಣಾ ತಿದ್ದುಪಡಿ ಮಸೂದೆ ಇನ್ನೂ ಎರಡು ವರ್ಷಗಳ ನಂತರವೂ ರಾಷ್ಟ್ರಪತಿಗಳ ಒಪ್ಪಿಗೆ ಪಡೆದಿಲ್ಲವೆನ್ನುವುದು ಇದಕ್ಕೆ ಸ್ಪಷ್ಟ ಉದಾಹರಣೆ. ಈಗಿರುವ ಭೂಸುಧಾರಣಾ ಕಾನೂನುಗಳ ಕುಂದುಕೊರತೆಗಳನ್ನು ನಿವಾರಿಸುವುದು, ದೊಡ್ಡ ಜಮೀನುದಾರರು ಬೇನಾಮಿಯಾಗಿ ಇಟ್ಟುಕೊಂಡಿರುವ ಹೆಚ್ಚುವರಿ ಜಮೀನನ್ನು ಪಡೆದು ಭೂಹೀನರು ಮತ್ತು ಬಹಳ ಕಮ್ಮಿ ಜಮೀನಿರುವವರಿಗೆಲ್ಲ ಹಂಚಲು ಹೆಚ್ಚು ಜಮೀನು ಸಿಗುವಂತೆ ಮಾಡುವುದು ಈ ತಿದ್ದುಪಡಿ ಮಸೂದೆಗಳ ಉದ್ದೇಶ. ಜನತೆಯನ್ನು ವರ್ಣಿಸಲಸಾಧ್ಯವಾದ ಸಂಕಷ್ಟಗಳೆಡೆಗೆ ತಳ್ಳಿರುವ ಕಾಂಗ್ರೆಸ್ (ಐ) ಆರ್ಥಿಕ ಧೋರಣೆಗಳು ಗುತ್ತೇದಾರಿಗಳು ಹಾಗೂ ಇತರ ಪಟ್ಟಭದ್ರ ಹಿತಾಸಕ್ತಿಗಳು ಸೊಂಪಾಗಿ ಬೆಳೆಯಲು ಅನುವು ಮಾಡಿವೆ.

ಸರಕಾರದ ವಿನಾಶಕಾರೀ ಆರ್ಥಿಕ ಧೋರಣೆಗಳು ಜನರ ಬವಣೆಗಳನ್ನು ಮತ್ತಷ್ಟು ಹೆಚ್ಚಿಸಿವೆ. ಅದು 15 ಸಾವಿರ ಕೋಟಿ ರೂಪಾಯಿಗಳ ಅಗಾಧ ಮೊತ್ತದಷ್ಟು ವಿದೇಶೀ ಸಾಲಮಾಡಿದೆ. ಬಹುಮುಖ್ಯ ಸಾಲಿಗನಾದ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ. ಎಂ. ಎಫ್.) ಜನತೆಯ ಮೇಲೆ ಹೆಚ್ಚೆಚ್ಚು ತೆರಿಗೆ ವಿಧಿಸಬೇಕೆಂದು, ಆಹಾರ ಧಾನ್ಯಗಳು, ಸೀಮೆ ಎಣ್ಣೆ, ಡೀಸೆಲ್ ಇತ್ಯಾದಿಗಳಿಗೆ ಸಹಾಯ ಧನವನ್ನು ರದ್ದುಮಾಡಿ ಅವುಗಳ ಬೆಲೆ ಏರಿಸಬೇಕೆಂದು ಕೇಳುತ್ತಿದೆ. ಅಲ್ಲದೆ ಬಹು ರಾಷ್ಟ್ರೀಯ ಕಂಪೆನಿಗಳಿಗೆ ರಾಷ್ಟ್ರ ವಿರೋಧಿ ಚಟುವಟಿಕೆ ಮುಂದುವರಿಸಿಕೊಂಡು ಹೋಗಲು ಸ್ವಾತಂತ್ರ್ಯವಿರಬೇಕು, ವಿದೇಶಗಳಿಂದ ಸರಕು ತರಿಸಿಕೊಳ್ಳಲು ಕಾನೂನನ್ನು ಸಡಿಲಗೊಳಿಸಬೇಕು, ಬ್ಯಾಂಕ್ ಸಾಲದ ಮೇಲೆ ಮಿತಿ ಹೇರಬೇಕು ಇತ್ಯಾದಿ ಬೇಡಿಕೆಗಳನ್ನು ಅದು ಮಂಡಿಸುತ್ತಿದೆ. ಬೂರ್ಜ್ವಾ–ಭೂಮಾಲಿಕ ಧೋರಣೆಗಳು ನಮ್ಮ ಜನತೆಯನ್ನು ನಾಶಗೊಳಿಸುತ್ತಿವೆ, ನಮ್ಮ ದೇಶವನ್ನು ನಾಶಗೊಳಿಸುತ್ತಿವೆ. ಈ ಜನವಿರೋಧೀ ಧೋರಣೆಗಳಿಗೆ ವಿರೋಧ ವ್ಯಕ್ತಪಡಿಸಲು ಜನವರಿ 5 ಅವಕಾಶ ಒದಗಿಸಿಕೊಟ್ಟಿದೆ. ಈ ವಿರೋಧವನ್ನು ಅತ್ಯಂತ ಪ್ರಭಾವಕಾರೀ ರೀತಿಯಲ್ಲಿ ವ್ಯಕ್ತಪಡಿಸಬೇಕೆಂದು ಪೊಲಿಟ್‌ಬ್ಯೂರೋ ಈ ಮೂರು ರಾಜ್ಯಗಳ ಮತದಾರರನ್ನು ವಿನಂತಿಸಿಕೊಳ್ಳುತ್ತದೆ.

ಆಳುವ ಪಕ್ಷದ ಧೋರಣೆಗಳಿಂದಾಗಿ ಉಂಟಾಗಿರುವ ಅತೃಪ್ತಿಯ ದುರ್ಲಾಭ ಪಡೆದು ದೇಶದ ಏಕತೆ, ಸಮಗ್ರತೆ ಹಾಗೂ ಜಾತ್ಯಾತೀಯತೆಗೆ ಸವಾಲೊಡ್ಡುವಂತೆ ವಿಚ್ಛಿದ್ರಕಾರೀ ಶಕ್ತಿ ಹಾಗೂ ಪ್ರತ್ಯೇಕತಾವಾದ ಬೆಳೆಸಲಾಗುತ್ತಿದೆ. ಸಾಮ್ರಾಜ್ಯಶಾಹೀ ಏಜೆಂಟರು ಇಂತಹ ವಿಚ್ಛಿದ್ರಕಾರೀ ಹಾಗೂ ಪ್ರತ್ಯೇಕತಾವಾದಿಗಳಿಗೆ ಸ್ಫೂರ್ತಿ ಹಾಗೂ ಸಹಾಯ ನೀಡುತ್ತಿದ್ದಾರೆ. ಅಸ್ಸಾಂ ಹಾಗೂ ಈಶಾನ್ಯ ಪ್ರದೇಶದ ಇತರ ಭಾಗಗಳಲ್ಲಿ ಪ್ರತ್ಯೇಕತಾವಾದಿಗಳು ಪಂಜಾಬ್‌ನಲ್ಲಿ ಖಲಿಸ್ತಾನ್ ವಾದಿಗಳು, ಕಾಶ್ಮೀರದಲ್ಲಿ ಇಸ್ಲಾಮೀ ಮೂಲಭೂತವಾದಿಗಳು, ಇತರ ಭಾಗಗಳಲ್ಲಿ ಹಿಂದೂ ಕೋಮು ವಾದಿಗಳ ಚಟುವಟಿಕೆಗಳಲ್ಲಿ ಇದನ್ನು ಕಾಣಬಹುದು. ಕೆಲವು ಶಕ್ತಿಗಳೊಂದಿಗೆ ಕಾಂಗ್ರೆಸ್ (ಐ) ಆಳರಸರೇ ಒಪ್ಪಂದ ಮಾಡಿಕೊಂಡಿದ್ದಾರೆ. ಕೇರಳದಲ್ಲಿ ಈಗಲೂ ಎಲ್ಲಾ ಕೋಮು ಶಕ್ತಿಗಳೊಂದಿಗೆ ಅವರ ಮೈತ್ರಿಯಿದೆ; ತ್ರಿಪುರಾದಲ್ಲಿ ಮುಂಬರುವ ಚುನಾವಣೆ ಎದುರಿಸಲು ತ್ರಿಪುರಾ ಉಪಜಾತಿ ಯುವಾ ಸಮಿತಿಯ ನಾಯಕತ್ವದೊಂದಿಗೆ ಮೈತ್ರಿಗೆ ಪ್ರಯತ್ನಿಸುತ್ತಿದ್ದಾರೆ. ಇದರ ಪರಿಣಾಮವೆಂದರೆ ದೇಶದ ಏಕತೆ ಹಾಗೂ ಸಮಗ್ರತೆಯನ್ನು ರಕ್ಷಿಸಿ ಬಲಗೊಳಿಸುವ ಸಮಸ್ಯೆ ಎದುರಾದಾಗ ಸರಕಾರ ನಿಸ್ಸಹಾಯಕತೆ ವ್ಯಕ್ತಪಡಿಸುತ್ತಿದೆ.

ಕಾಂಗ್ರೆಸ್ (ಐ) ಆಳ್ವಿಕೆಯಲ್ಲಿ ಹರಿಜನರ ಮೇಲೆ ಅತ್ಯಾಚಾರಗಳು ಮುಂದುವರಿಯುತ್ತಿವೆ; ಅವು ಮತ್ತಷ್ಟು ತೀವ್ರವಾಗುತ್ತಿವೆ. ದೇಶದ ಹಲವೆಡೆ ಹಿಂದೆಂದೂ ಕಾಣದ ಮಟ್ಟದಲ್ಲಿ ಕೋಮು ಗಲಭೆಗಳು ನಡೆಯುತ್ತಿವೆ.

ತಮ್ಮ ಆಂತರಿಕ ನೀತಿಗಳಿಂದಾಗಿ ಜನರ ಮೇಲೆ ಹೇಳಲಸಾಧ್ಯವಾದಷ್ಟು ಬವಣೆ ಹೊರಿಸಿ ತೀರಾ ಹಾಸ್ಯಾಸ್ಪದ ಸೋಲನ್ನನುಭವಿಸಿರುವುದನ್ನು ಮರೆಮಾಡಲು ಕಾಂಗ್ರೆಸ್ [ಐ] ಆಳರಸರು ಅಂತರರಾಷ್ಟ್ರೀಯ ವಲಯದಲ್ಲಿ ಬಹಳ ಸಾಧಿಸಿದ್ದೇವೆಂದು ಕೊಚ್ಚಿಕೊಳುತ್ತಿದ್ದಾರೆ. ಸೋವಿಯೆತ್ ಸಂಘ ಹಾಗೂ ಇತರ ಸಮಾಜವಾದೀ ದೇಶಗಳೊಂದಿಗೆ ಭಾರತ ಹೊಂದಿರುವ ನಿಕಟ ಸಂಪರ್ಕ, ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ, ವಿಶೇಷವಾಗಿ ಫ್ಯಾಲೆಸ್ಟೈನ್ ಹಾಗೂ ದಕ್ಷಿಣ ಆಫ್ರಿಕಾದ ಜನತೆಯ ಹೋರಾಟಗಳಿಗೆ ನೀಡಿದ ಬೆಂಬಲ, ಅಲಿಪ್ತ ಚಳವಳಿಯಲ್ಲಿ ಭಾರತದ ಪ್ರಮುಖ ಪಾತ್ರ ಇತ್ಯಾದಿ. ವಿಚಾರಗಳು ಎಲ್ಲಾ ಎಡ ಹಾಗೂ ಪ್ರಗತಿಶೀಲ ಶಕ್ತಿಗಳು ಸ್ವಾಗತಿಸುವಂಥಹವು ಆದರೆ ಅಮೇರಿಕನ್ ಸಾಮ್ರಾಜ್ಯಶಾಹಿ ಜಗತ್ತನ್ನು ನ್ಯೂಕ್ಲಿಯರ್ ಸ್ಫೋಟದಿಂದ ನಾಶಗೊಳಿಸಲು ತೀವ್ರ ತಯಾರಿ ನಡೆಸುತ್ತಿರುವ, ಪಾಕಿಸ್ತಾನದಲ್ಲಿ ಮಿಲಿಟರಿ ಸರ್ವಾಧಿಕಾರಕ್ಕೆ ಶಸ್ತ್ರಾಸ್ತ್ರ ನೀಡಿ ದೇಶದ ಭದ್ರತೆ ಹಾಗೂ ಸ್ವಾತಂತ್ರ್ಯಕ್ಕೆ ನೇರ ಬೆದರಿಕೆ ಹಾಕಿರುವ, ಹಿಂದೂ ಸಾಗರದಲ್ಲಿ ಸೇನಾ ಜಮಾವಣೆ ನಡೆಸುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ (ಐ) ಆಳರಸರು ಅಮೇರಿಕನ್ ಸಾಮ್ರಾಜ್ಯಶಾಹಿಯನ್ನು ನಮ್ಮ ದೇಶದ ಹಾಗೂ ಜಗತ್ತಿನ ಎಲ್ಲಾ ಜನರ ಶತ್ರು ಎಂದು ಬೊಟ್ಟುಮಾಡಿ ಎಂದೂ ಹೆಸರಿಸುವುದಿಲ್ಲ. ಸಾಮ್ರಾಜ್ಯಶಾಹಿ ಒಡ್ಡುತ್ತಿರುವ ಅಪಾಯವನ್ನು ಎದುರಿಸಲು ಅವರು ಎಂದೂ ಜನತೆಯನ್ನು ಹುರಿದುಂಬಿಸುವುದಿಲ್ಲ.

ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಈ ಮೂರು ರಾಜ್ಯಗಳ ಮತದಾರರು ಜನವರಿ 5 ರಂದು ಕಾಂಗ್ರೆಸ್ [ಐ]ನ ವಿರುದ್ಧ ತಮ್ಮ ದೃಢ ತೀರ್ಪನ್ನು ವ್ಯಕ್ತಗೊಳಿಸುತ್ತಾರೆ ಎಂದು ಪೊಲಿಟ್‌ಬ್ಯೂರೋ ನಿರೀಕ್ಷಿಸುತ್ತದೆ.

ತ್ರಿಪುರಾದಲ್ಲಿ ಎಡರಂಗ ಸರಕಾರ ತನ್ನ ಪ್ರಥಮ ಐದು ವರ್ಷದ ಅವಧಿಯನ್ನು ಗೌರವಶಾಲೀ ದಾಖಲೆಯೊಂದಿಗೆ ಪೂರ್ಣಗೊಳಿಸುತ್ತಿದೆ. ಎಡರಂಗದ ಧೋರಣೆಗಳಿಂದಾಗಿ ಈಶಾನ್ಯ ಪ್ರದೇಶದ ಇತರೆಡೆಯಲ್ಲಾದಂತೆ ಪ್ರತ್ಯೇಕತಾವಾದಿಗಳು ತ್ರಿಪುರಾದಲ್ಲಿ ತಲೆ ಎತ್ತಲಾಗದೆ ಸುಮ್ಮನಿರಬೇಕಾಯಿತು. ಆದಿವಾಸಿಗಳು ಹಾಗೂ ಇತರರ ನಡುವೆ ಗಲಭೆ ನಡೆಸಲು ನಡೆದ ಒಂದು ಪ್ರಯತ್ನವನ್ನು ತಕ್ಷಣ ಹಿಮ್ಮೆಟ್ಟಿಸಲಾಯಿತು. ಆ ಹತ್ಯಾಕಾಂಡದಲ್ಲಿ ಹಲವು ಜೀವಗಳು ಬಲಿಯಾದರೂ ಎಡರಂಗ, ವಿಶೇಷವಾಗಿ ಸಿ ಪಿ ಐ [ಎಂ]ಗೆ, ತಕ್ಷಣ ಪರಿಸ್ಥಿತಿಯನ್ನು ಸಾಮಾನ್ಯಗೊಳಿಸುವಲ್ಲಿ ಮಾತ್ರವಲ್ಲ, ಇದರಿಂದಾಗಿ ನಿರ್ಗತಿಕರಾದವರನ್ನು ಮತ್ತೆ ನೆಲೆಗೊಳಿಸಿ ರಾಜ್ಯದ ಆದಿವಾಸಿ ಹಾಗೂ ಬಂಗಾಲೀ ಜನರ ನಡುವೆ ಐಕ್ಯತೆಯನ್ನು ಮತ್ತೆ ಸ್ಥಾಪಿಸಿ ಬಲಗೊಳಿಸಲು ಸಾಧ್ಯವಾಯಿತು.

ತ್ರಿಪುರಾ ಈಶಾನ್ಯ ಗಡಿ ಪ್ರದೇಶದಲ್ಲಿರುವ ಒಂದು ಚಿಕ್ಕ ರಾಜ್ಯ. ಅದಕ್ಕೆ ತನ್ನದೇ ಆದ ಸಂಪನ್ಮೂಲಗಳೇನೂ ಇಲ್ಲ. ಅಭಿವೃದ್ಧಿಗೆ ಅದು ಸಂಪೂರ್ಣ ಕೇಂದ್ರ ಸರಕಾರವನ್ನೇ ಅವಲಂಬಿಸಬೇಕು. ಕೇಂದ್ರ ಈ ರಾಜ್ಯವನ್ನು ಕಡೆಗಣಿಸಿದ್ದರೂ, ಭಾರತದ ಸಂವಿಧಾನದಲ್ಲಿ ರಾಜ್ಯ ಸರಕಾರಕ್ಕೆ ಕೇವಲ ಮಿತವಾದ ಅಧಿಕಾರಗಳು ಮಾತ್ರವಿದ್ದರೂ ಕೂಡಾ ಜನತೆಯ ಹಲವು ಆಶೋತ್ತರಗಳನ್ನು ಈಡೇರಿಸಿರುವ ಯಶಸ್ವೀ ದಾಖಲೆ ಎಡರಂಗ ಸರಕಾರದ್ದು. ಮೊತ್ತ ಮೊದಲ ಬಾರಿಗೆ ಆದಿವಾಸಿ ಸ್ವಯಮಾಡಳಿತ ಜಿಲ್ಲಾ ಸಮಿತಿಯ

(7ನೇ ಪುಟ ನೋಡಿ)

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ

1983 ಜನವರಿ 5 ರಂದು ಕರ್ನಾಟಕ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆಯೆಂದು ಧಿಡೀರನೆ ಪ್ರಕಟನೆಯಾಯಿತು. ಇದು ನ್ಯಾಯವಾಗಿ ಮಾರ್ಚ್ ತಿಂಗಳಲ್ಲಿ ನಡೆಯಬೇಕಾಗಿತ್ತು. ಆದರೆ ಕಾಂಗ್ರೆಸ್ ಪಕ್ಷದೊಳಗಿನ ಕಚ್ಚಾಟಗಳು ಒಂದು ಕಡೆ ಮತ್ತು ಇನ್ನೊಂದು ಕಡೆ ವಿರೋಧ ಪಕ್ಷಗಳ ನಡುವೆ ಹೊಂದಾಣಿಕೆಯ ಪ್ರಯತ್ನ–ಇವುಗಳಿಂದ ಗಾಭರಿಗೊಂಡ ಸರಕಾರ ವಿಧಾನಸಭೆಯ ಅವಧಿಯು ಪೂರ್ಣಗೊಳ್ಳುವ ಮೊದಲೇ ಚುನಾವಣೆಯನ್ನು ತಕ್ಷಣ ನಡೆಸುವ ತೀರ್ಮಾನ ಕೈಗೊಂಡಿದೆ. ಇದು ಆಳುವ ಕಾಂಗ್ರೆಸ್ ಪಕ್ಷವು ಪಾರ್ಲಿಮೆಂಟರಿ ಪದ್ಧತಿಯ ಬಗ್ಗೆ ತೋರುವ ತಾತ್ಸಾರದ ಪ್ರದರ್ಶನವಾಗಿದೆ.

ಇದೊಂದು ರಾಜ್ಯದ ಪ್ರಜಾಪ್ರಭುತ್ವ ಶಕ್ತಿಗಳಿಗೆ ಕೊಟ್ಟ ಸವಾಲಾಗಿದೆ.

ವಿರೋಧ ಪಕ್ಷಗಳ ಮತಗಳು ಹಂಚಿ ಹೋಗಿದ್ದರಿಂದ ಹಿಂದಿನ ಚುನಾವಣೆಗಳೆಲ್ಲ್ಲ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಾಧ್ಯವಾಗಿರುವುದು ಜನರಿಗೆ ಮನದಟ್ಟಾಗಿದೆ. ಈ ವಿಷಮ ಪರಿಸ್ಥಿತಿಯನ್ನು ಹೋಗಲಾಡಿಸಲು ಎಲ್ಲಾ ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಂದುಗೂಡಿಸಿ ಹೋರಾಡಲು ನಡೆಸಿದ ನಮ್ಮ ಪ್ರಯತ್ನವು ಈಗ ಬಹುಮಟ್ಟಿಗೆ ಸಫಲವಾಗಿದೆ. ಜನತಾ ಪಕ್ಷ, ಕರ್ನಾಟಕ ಕ್ರಾಂತಿರಂಗ, ಭಾರತ ಕಮ್ಯೂನಿಸ್ಟ್ ಪಕ್ಷ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಈ ಪಕ್ಷಗಳು ಕ್ಷೇತ್ರಗಳ ಹಂಚಿಕೆಯ ಕುರಿತು ಹೊಂದಾಣಿಕೆಗೆ ಬಂದಿರುವುದಲ್ಲದೆ, ಚುನಾವಣೆಯ ಪ್ರಚಾರವನ್ನು ಜಂಟಿಯಾಗಿ ನಡೆಸಬೇಕೆಂದು ತೀರ್ಮಾನಿಸಿವೆ. ಇದೊಂದು ಈ ಚುನಾವಣೆಯ ವೈಶಿಷ್ಟ್ಯವಾಗಿದೆ. ನಮ್ಮ ರಾಜ್ಯದಲ್ಲಿ ಇದೊಂದು ಚಾರಿತ್ರಿಕ ಬೆಳವಣಿಗೆಯೆಂದು ಹೆಮ್ಮೆಯಿಂದ ಹೇಳಬಹುದು. ಸರ್ವಾಧಿಕಾರಿ ವಿರೋಧಿ ಹೋರಾಟದಲ್ಲಿ ಈ ಐಕ್ಯತೆ ಹೆಚ್ಚು ಸಹಾಯಕಾರಿ ಆಗಬಹುದು.

ದೇಶದ ಪರಿಸ್ಥಿತಿ

ಸುಭದ್ರ ಸರಕಾರವನ್ನು ಒದಗಿಸುವ, ಬೆಲೆಯೇರಿಕೆಯನ್ನು ತಡೆಗಟ್ಟುವ ಘೋಷಣೆಯೊಂದಿಗೆ 1980ರ ಜನವರಿಯಲ್ಲಿ ಕಾಂಗ್ರೆ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂತು. 1980 ಜೂನ್ ತಿಂಗಳಲ್ಲಿ ಉತ್ತರ ಪ್ರದೇಶ, ಮಧ್ಯ ಪ್ರದೇಶ, ಬಿಹಾರ, ಪಂಜಾಬ್, ರಾಜಸ್ಥಾನ, ಮಹಾರಾಷ್ಟ್ರ, ಒರಿಸ್ಸಾ ರಾಜ್ಯಗಳಲ್ಲಿ ಅದು ಅಧಿಕಾರಕ್ಕೆ ಬಂತು. ಹರಿಯಾಣ, ಹಿಮಾಚಲ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಪಕ್ಷಾಂತರ ನಡೆಸುವ ಮೂಲಕ ಕಾಂಗ್ರೆ ಸರಕಾರಗಳನ್ನು ಸ್ಥಾಪಿಸಿತು.

ಆದರೆ ಈ ಮೂರು ವರ್ಷಗಳ ಆಡಳಿತೆಯ ನಂತರ ಇದೀಗ ಈ ಸರಕಾರಗಳ ಸಾಧನೆಗಳನ್ನು ಪರಿಶೀಲಿಸಿದರೆ ಜನತೆಗೆ ಕೊಟ್ಟ ಭರವಸೆಗಳು ಈಡೇರಲಿಲ್ಲೆಂಬುದು ಸ್ಪಷ್ಟವಾಗುವುದು.

ಅದರ ಬದಲಾಗಿ ಕಾಂಗ್ರೆ ಅಧಿಕಾರ ನಡೆಸಿದ ಎಲ್ಲ ರಾಜ್ಯಗಳಲ್ಲೂ ಮತೀಯ ಗಲಭೆಗಳು ಹಿಂದೆಂದಿಗಿಂತಲೂ ಅಧಿಕಗೊಂಡವು. ಹರಿಜನ–ಗಿರಿಜನರ ಮೇಲಿನ ದಬ್ಬಾಳಿಕೆಗೆ ಮಿತಿಯೇ ಇಲ್ಲದಾಗಿದೆ. ಅವರ ಶೋಷಣೆಗೆ ತಡೆ ಇಲ್ಲದಾಗಿದೆ. ದರೋಡೆಕೋರರ ಹಾವಳಿ ಹಾಡು ಹಗಲಲ್ಲೇ ಸರಾಗವಾಗಿ ನಡೆದಿವೆ. ಕಾನೂನು ರಕ್ಷಣೆಯ ಹೆಸರಿನಲ್ಲಿ ಕೈದಿಗಳ ಕಣ್ಣು ಕೀಳುವಂತಹ ಕ್ರೂರ ಘಟನೆಗಳು ನಡೆದವು.

ಲಂಚ, ರುಷುವತ್ತು ಕಾಂಗ್ರೆಸ್ (ಐ) ಆಡಳಿತೆಯ ದಿನನಿತ್ಯದ ಕಸುಬಾಗಿದೆ. ಆಡಳಿತೆಯು ಅತೀವ ಹದಗೆಟ್ಟಿದೆ. ಜನಸಾಮಾನ್ಯರ ಮತ್ತು ಕೃಷಿ-ಕೈಗಾರಿಕೆಗಳ ಸಮಸ್ಯೆಗಳನ್ನು ಕುರಿತು ಚಿಂತಿಸಿ, ಅವುಗಳಿಗೆ ಪರಿಹಾರ ಕಂಡುಕೊಳ್ಳಲು, ಅವುಗಳ ಬಗ್ಗೆ ಯೋಜನೆಗಳನ್ನು ನಿರ್ಧರಿಸಿ ಧೋರಣೆಗಳನ್ನು ರೂಪಿಸಲು ಕಾಂಗ್ರೆಸ್ (ಐ) ಸರಕಾರಗಳಿಗೆ ಸಮಯವೇ ಇಲ್ಲವಾಗಿದೆ.

ರೈತರು, ಕಾರ್ಮಿಕರು, ವಿದ್ಯಾರ್ಥಿ-ಯುವಜನರು, ಮಹಿಳೆಯರು, ಸಣ್ಣ ಪುಟ್ಟ ವ್ಯಾಪಾರ-ಕೈಗಾರಿಕೆಗಳನ್ನು ನಡೆಸುವವರು ಸರಕಾರದ ತಪ್ಪು ಧೋರಣೆಗಳ ಫಲವಾಗಿ ಹಾಗೂ ಅಸಡ್ಡೆಯಿಂದಾಗಿ ಉಂಟಾದ ಪರಿಸ್ಥಿತಿಯನ್ನು ಸಂಘಟಿತರಾಗಿ ಎದುರಿಸಲು ಮುಂದಾದಾಗ ಅವರ ಬಗ್ಗೆ ಸಹಾನುಭೂತಿ ತೋರಿಸಿ, ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವ ಬದಲು, ಅವರ ಐಕ್ಯತೆ ಮುರಿಯುವ, ಅವರ ಧ್ವನಿಯನ್ನೇ ಅಡಗಿಸುವ ಕ್ರಮ ಕೈಗೊಂಡಿತು. ಅವರ ಮೇಲೆ ಅಪಾರ ದಬ್ಬಾಳಿಕೆ ನಡೆಸಿತು.

ಒಂದೆಡೆ ವಿವಿಧ ಜನ ವಿಭಾಗಗಳ ಪ್ರಕ್ಷೋಭೆಗಳನ್ನು ತಡೆಗಟ್ಟಲು ರಾಷ್ಟ್ರೀಯ ಭದ್ರತಾ ಕಾನೂನು, ಅಗತ್ಯ ಸೇವಾ ನಿರ್ವಹಣಾ ಕಾನೂನು, ಕೈಗಾರಿಕಾ (ತಿದ್ದುಪಡಿ) ಮಸೂದೆ, ಟ್ರೇಡ್ ಯೂನಿಯನ್ (ತಿದ್ದುಪಡಿ) ಮಸೂದೆ ಮೊದಲಾದ ಕರಾಳ ಶಾಸನಗಳನ್ನು ತಮ್ಮ ಪಕ್ಷದ ಬಹುಮತದಿಂದ ಜಾರಿಗೆ ತರಲಾಗಿದೆ. ಮತ್ತೊಂದೆಡೆ ಪ್ರತಿ ಚಳವಳಿಯ ಸಂದರ್ಭದಲ್ಲೂ ಜನತೆಯ ಮೇಲೆ ಪೋಲೀಸರನ್ನು ಛೂಬಿಟ್ಟು, ಲಾಠಿ ಛಾರ್ಜ್, ಗೋಲೀಬಾರು, ಬಂಧನ ಮುಂತಾದ ದಬ್ಬಾಳಿಕೆಯ ಕ್ರಮಗಳ ಮೂಲಕ ಹೋರಾಟಗಳನ್ನು ಮುರಿಯಲು ಪ್ರಯತ್ನ ನಡೆಸಿದರು.

ಕಳೆದ ಮೂರು ವರ್ಷಗಳಲ್ಲಿ ಬೆಲೆ ಏರಿಕೆ ಹೆಚ್ಚಾಗಿದೆ. ರೂಪಾಯಿಯ ಮೌಲ್ಯ 17 ಪೈಸೆಗೆ ಇಳಿದಿದೆ. ನಿರುದ್ಯೋಗಿಗಳ ಸಂಖ್ಯೆ ಗಗನಕ್ಕೇರಿದೆ. ಅರೆ ಉದ್ಯೋಗಿಗಳನ್ನು ಪರಿಗಣಿಸಿದರೆ ಈ ಸಂಖ್ಯೆಯನ್ನು ಊಹಿಸಲು ಅಸಾಧ್ಯ. "ಗರೀಬಿ ಹಟಾವೋ" ಘೋಷಣೆಯ ಆಧಾರದಲ್ಲಿ ಅಧಿಕಾರಕ್ಕೇರಿದ ಇಂದಿರಾ ಗಾಂಧಿ ಈಗ ಈ ಘೋಷಣೆಯನ್ನು ಉಚ್ಚರಿಸಲೂ ಧೈರ್ಯ ಇಲ್ಲವಾಗಿದೆ.

ಕಾಂಗ್ರೆಸ್ ಸರಕಾರಗಳು ಕಳೆದ 35 ವರ್ಷಗಳಿಂದ ಅನುಸರಿಸುತ್ತ ಬಂದಿರುವ ಗುತ್ತೇದಾರಿ ಬಂಡವಾಳದಾರರ ಮತ್ತು ದೊಡ್ಡ ಭೂಮಾಲಿಕರ ಪರವಾದ ಆರ್ಥಿಕ-ರಾಜಕೀಯ ನೀತಿಗಳ ಫಲವಾಗಿ ನಮ್ಮ ದೇಶ ಮತ್ತು ಜನತೆ ಇಂಥ ಹೀನಾಯ ಪರಿಸ್ಥಿತಿಯನ್ನೆದುರಿಸಬೇಕಾಗಿ ಬಂದಿದೆ. ದಿನ ಕಳೆದಂತೆ ಆರ್ಥಿಕ ಬಿಕ್ಕಟ್ಟು ತೀವ್ರಗೊಳ್ಳುತ್ತಿದೆ. ರಾಜಕೀಯದ ಮೇಲೆ ಅದು ಕೆಟ್ಟ ಪರಿಣಾಮ ಬೀರುತ್ತಿದೆ.

ಈ ರೀತಿ ಆರ್ಥಿಕ ಬಿಕ್ಕಟ್ಟು ತೀವ್ರಗೊಳ್ಳುತ್ತಿರುವಾಗ, ಇದರಿಂದ ಬಿಡುಗಡೆ ಹೊಂದಲು ಇಂದಿರಾ ಗಾಂಧಿಯವರು ಲೋಕಸಭೆಯಲ್ಲಿ ಚರ್ಚೆ ಮಾಡದೆ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ಬಲಿಯಾಗಿ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (ಐ.ಎಂ.ಎಫ್.)ಯಿಂದ ರೂ. 5600 ಕೋಟಿ ಭಾರಿ ಮೊತ್ತದ ಸಾಲವನ್ನು ಪಡೆದಿದ್ದಾರೆ. ದೇಶದ ಸಾರ್ವಭೌಮತ್ವವನ್ನು ಪ್ರಶ್ನಿಸುವ, ಜನತೆಯ ಅನುಕೂಲತೆಗಳನ್ನು ಕಡಿತಗೊಳಿಸುವ ಶರತ್ತುಗಳನ್ನು ಒಪ್ಪಿ ಈ ಸಾಲವನ್ನು ಪಡೆಯಲಾಗಿದೆ. ಪರಿಣಾಮವಾಗಿ, ರೈತರು ಬೆಳೆಸಿದ ಬೆಳೆಗಳಿಗೆ ಹೆಚ್ಚು ಖರ್ಚು, ಮಾರುಕಟ್ಟೆ ದರಗಳು ಬಹಳ ಕಡಿಮೆಯಾಗಿ ರೈತರು ನ್ಯಾಯ ಬೆಲೆಗಾಗಿ ದೇಶಾದ್ಯಂತ ಚಳವಳಿ ಹೂಡಬೇಕಾಗಿ ಬಂದಿದೆ. ರಸಾಯನಿಕ ಗೊಬ್ಬರಕ್ಕೆ ಕೊಡಮಾಡಲಾಗುತ್ತಿದ್ದ ಸಬ್‌ಸೀಡಿಯನ್ನು ನಿಲ್ಲಿಲಾಯಿತು. 'ಕೂಲಿಗಾಗಿ ಕಾಳು' ಕಾರ್ಯಕ್ರಮವನ್ನು ರದ್ದುಮಾಡಲಾಯಿತು.

ಇದೇ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿಗಳಿಂದ ಪ್ರೇರಿತವಾದ ದೇಶದ ಸಾರ್ವಭೌಮತ್ವವನ್ನು, ಐಕ್ಯತೆಯನ್ನು ಪ್ರಶ್ನಿಸುವ ಪ್ರತ್ಯೇಕತಾವಾದಿ ಛಿದ್ರಕಾರಿ ಶಕ್ತಿಗಳು ಹಲವಾರು ರೂಪಗಳಲ್ಲಿ ತಮ್ಮ ಚಟುವಟಿಕೆಗಳನ್ನು ನಿರ್ಭಯದಿಂದ ನಡೆಸಲು ಪ್ರಾರಂಭಿಸಿವೆ. ಇವುಗಳನ್ನೆಲ್ಲಾ ಸಕಾಲದಲ್ಲಿ ಗುರ್ತಿಸಿ ನಿಗ್ರಹಿಸುವ ಬದಲು, ದೈನಂದಿನ ತೀವ್ರಗೊಳ್ಳುತ್ತಿರುವ ಚಳುವಳಿಗಳಿಂದ ಜನರನ್ನು ದೂರ ಸೆಳೆಯುವ ದೃಷ್ಟಿಯಿಂದ ಇಂಥ ಛಿದ್ರಕಾರಿ ಶಕ್ತಿಗಳಿಗೆ ಕಾಂಗ್ರೆಸ್ (ಐ) ಪಕ್ಷ ಮತ್ತು ಆ ಪಕ್ಷದ ಸರಕಾರಗಳು ಬೆಂಬಲ ನೀಡುತ್ತಿವೆ. ಅಸ್ಸಾಂ ಸಮಸ್ಯೆ, ಖಲಿಸ್ತಾನ್ ಚಳುವಳಿ, ಮತೀಯ, ಜಾತೀಯ ಗಲಭೆಗಳು, ಮೀಸಲಾತಿ ಪರ–ವಿರೋಧಿ ಚಳವಳಿಗಳು ಇತ್ಯಾದಿ, ಈ ಎಲ್ಲ ಸಮಸ್ಯೆಗಳಿಗೆ ಪ್ರಜಾಸತ್ತಾತ್ಮಕ ರೀತಿಯ ಪರಿಹಾರಗಳನ್ನು ಕಂಡುಹಿಡಿಯಲು ಅಸಮರ್ಥವಾಗಿದೆ ಕಾಂಗ್ರೆಸ್ ಸರಕಾರ. ಅಲ್ಲದೆ ಪರೋಕ್ಷವಾಗಿ ಈ ಗಲಭೆಗಳನ್ನು ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸಲು ಪ್ರಯತ್ನಿಸುತ್ತಿದೆ.

ರಾಜ್ಯದ ಪರಿಸ್ಥಿತಿ

ಕಳೆದ ಚುನಾವಣೆಯಲ್ಲಿ ಡಿ. ದೇವರಾಜಅರಸುರವರ ನೇತೃತ್ವದಲ್ಲಿ ಇಂದಿರಾ ಕಾಂಗ್ರೆಸ್ ಬಹುಮತದಿಂದ ಆರಿಸಿ ಬಂತು. ಆದರೆ ಅರಸುರವರಿಗೂ ಇಂದಿರಾ ಗಾಂಧಿಗೂ ಭಿನ್ನಾಭಿಪ್ರಾಯ ಬಂದು ಅವರು ಇಂದಿರಾರವರನ್ನು ಎದುರಿಸಿ ಹೊರಬಂದಾಗ ರಾಜ್ಯದಲ್ಲಿ ಇಂದಿರಾ ವಿರೋಧಿ ಸರಕಾರ ಬಂತು. ಕೆಲವೇ ಶಾಸನಸಭಾ ಸದಸ್ಯರು ಇಂದಿರಾರವರ ಬೆಂಬಲಿಗರಾಗಿ ಮುಂದುವರಿದರು. ಆದರೆ 1980ರಲ್ಲಿ ಲೋಕಸಭಾ ಚುನಾವಣೆ ನಡೆದಾಗ ಕಾಂಗ್ರೆ ಪಕ್ಷದ ಅಭ್ಯರ್ಥಿಗಳೇ ನಮ್ಮ ರಾಜ್ಯದಲ್ಲಿ ಗೆದ್ದು ಬಂದ ಕಾರಣದಿಂದ ಕೂಡಲೇ ಡಿ. ಅರಸುರವರು ತಮಗಾದ ಸೋಲನ್ನೊಪ್ಪಿಕೊಂಡು ತಮ್ಮ ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟರು. ಚುನಾವಣಾ ಫಲಿತಾಂಶ ಹೊರಬಿದ್ದ ಕ್ಷಣದಿಂದ ಪಕ್ಷಾಂತರ ರಾಜ್ಯದಲ್ಲಿ ಆರಂಭವಾಗಿ ಕ್ರಮೇಣ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಗುಂಡೂರಾಯರಿಗೆ ಬಹುಸಂಖ್ಯಾತ ಶಾಸನಸಭಾ ಸದಸ್ಯರ ಬೆಂಬಲ ದೊರೆತು ಅವರ ನೇತೃತ್ವದಲ್ಲಿ ಕಾಂಗ್ರೆ ಸರಕಾರ ಕರ್ನಾಟಕ ರಾಜ್ಯದಲ್ಲಿ ಪುನಃ ಬರಲು ಸಾಧ್ಯವಾಯಿತು. ಇದು ಪಕ್ಷಾಂತರದಿಂದ ಬಂದ ಸರಕಾರವೇ ಹೊರತು ನಿಜವಾದ ಪ್ರಜಾಸತ್ತಾತ್ಮಕ ಸರಕಾರವೆಂದು ಹೇಳಲು ಸಾಧ್ಯವಿಲ್ಲ. ಈ ಸರಕಾರವನ್ನು ಇಂದಿರಾರವರು ರಾಜ್ಯದ ಜನತೆಯ ಮೇಲೆ ಹೊರಿಸಿದ್ದು ನಾಚಿಕೆಗೇಡು. ಡಿ. ಅರಸುರವರು ರಾಜೀನಾಮೆ ಕೊಟ್ಟಾಗ ನ್ಯಾಯವಾಗಿ ವಿಧಾನಸಭೆಗೆ ಚುನಾವಣೆ ನಡೆಯಬೇಕಿತ್ತು. ಅದನ್ನು ಮಾಡದೆ ಪಕ್ಷಾಂತರಿಗಳ ಬೆಂಬಲದಿಂದ ಸರಕಾರ ರಚಿಸಿದ "ಗೌರವ" ಗುಂಡೂರಾಯರಿಗೆ ಸೇರಿದೆ. ಈ ಸರಕಾರದ ವೈಖರಿಯನ್ನು ವರ್ಣಿಸಲು ಸಾಧ್ಯವಿಲ್ಲ. ಅದರ ಸಾಧನೆಗಳನ್ನು ನೋಡೋಣ.

ರಾಜ್ಯಾದ್ಯಂತವಾಗಿ ತಮ್ಮ ಹೊಗಳುಭಟ್ಟಂಗಿಗಳಿಂದ ಗುಂಡೂರಾಯರು ನಡೆಸಿಕೊಂಡ ಅದ್ದೂರಿಯ ಸನ್ಮಾನ ಸಮಾರಂಭಗಳು, ತುಲಾಭಾರಗಳು, ಬೆಳ್ಳಿಗಧೆ ಅರ್ಪಣೆ ಮೊದಲಾದವುಗಳೆಲ್ಲ ಪ್ರಪ್ರಥಮ ಸಾಧನೆಗಳು. ಅದರಲ್ಲೂ ಸಾವಿರಾರು ಸ್ಥೈರ್ಯಫಂಡರಿ ಪದವೀಧರರನ್ನು ಕಾಯಂ ಮಾಡಲಾಗುವುದೆಂದು ಭರವಸೆಕೊಟ್ಟು, ಅವರಿಂದ ತುಲಾಭಾರ ಮಾಡಿಸಿಕೊಂಡು, ವಾಗ್ದಾನ ಪೂರೈಸಲ್ಪಡಲಾರದಾದಾಗ, ಸ್ಟೈಫಂಡರಿಗಳು ವಿಧಾನಸೌಧದೆದುರು ಇತ್ತೀಚೆಗೆ ಉಪವಾಸ ಸತ್ಯಾಗ್ರಹ ಕೈಗೊಂಡಾಗ, ಅವರನ್ನೆಲ್ಲ ಕೆಲಸದಿಂದ ವಜಾಮಾಡಲಾಗುವುದೆಂಬ ಬೆದರಿಕೆ ಹಾಕಿದ್ದು ಮತ್ತೊಂದು ಸಾಧನೆ.

ಹೋದಲ್ಲೆಲ್ಲ ಪರಿಹಾರ ನೀಡುವ ಭರವಸೆಗಳನ್ನು ಕೊಟ್ಟು ಚಪ್ಪಾಳೆ ಬಾರಿಸಿಕೊಂಡು, ರಾಜಧಾನಿಗೆ ಹಿಂತಿರುಗಿದ ನಂತರ ಆಶ್ವಾಸನೆಗಳನ್ನೇ ಮರೆತು ಬಿಟ್ಟಿರುವುದೂ, ಒಂದು ಎಕರೆ ಭೂಮಿಗಾಗಿ ಲಕ್ಷಾಂತರ ರೈತರು ಬಾಯಿ ಬಿಡುತ್ತಿರುವಾಗ, ಲಕ್ಷಾಂತರ ಎಕ್ರೆ ಸರಕಾರಿ ಭೂಮಿಯನ್ನು ಕಾಫೀ, ಚಹಾ ತೋಟದ ಮಾಲೀಕರ ಹೆಸರಿನಲ್ಲಿ ಕ್ರಮಬದ್ಧಗೊಳಿಸಲು ಅನುವು ಮಾಡಿ ಅವರ ಒಲವನ್ನು ಪಡೆದಿರುವುದು, ಸರಕಾರಕ್ಕೆ ಆದಾಯಬೇಕೆಂದು ಬಡವರ ಮೇಲೆ ಹೊಸ ತೆರಿಗೆಗಳನ್ನು ಹೇರುತ್ತಿರುವಾಗಲೇ ತೋಟ ಮಾಲೀಕರ ಮೇಲೆ ಹಾಕಿದ್ದ ಕೃಷಿ ವರಮಾನ ತೆರಿಗೆಯಲ್ಲಿ ರಿಯಾಯಿತಿ ತೋರಿಸಿದ್ದು, ಇಷ್ಟೇ ಅಲ್ಲದೆ ಉದ್ದೇಶಪೂರ್ವಕವಾಗಿ ತಪ್ಪಾಗಿ ಕನಿಷ್ಠ ಕೂಲಿ ನಿರ್ಧರಿಸಿ, ಹೈ ಕೋರ್ಟಿನಲ್ಲಿ ಅದು ತಳ್ಳಿಹಾಕಲ್ಪಡುವಂತೆ ಮಾಡಿ 28 ಕೈಗಾರಿಕೆಗಳ ಲಕ್ಷಾಂತರ ಅಸಂಘಟಿತ, ಮತ್ತು ಕೃಷಿ ಕೂಲಿಗಾರರಿಗೆ ಕನಿಷ್ಠ ಕೂಲಿ ಸಿಗದಂತೆ ಮಾಡಿರುವುದು ಗುಂಡೂರಾವ್ ಸರಕಾರದ ವೈಶಿಷ್ಟ್ಯಗಳು.

ಸರ್ಕಸ್ ದುರಂತ, ಕಳ್ಳಭಟ್ಟಿ ಪ್ರಕರಣ, ಸಿಮೆಂಟ್ ಹಗರಣ, ನಿವೇಶನ ವಿತರಣಾ ಯೋಜನೆಯಲ್ಲಿ ಅಕ್ರಮಗಳು, ಕೋಳಚೆ ಪ್ರದೇಶ ನಿರ್ಮೂಲನ ಅವ್ಯವಹಾರಗಳು, ಅರಣ್ಯ ಭೂಮಿಯ ಆಕ್ರಮಣಗಳು, ಅರಣ್ಯ ಕಟ್ಟಿಗೆ ಕಳ್ಳ ಸಾಗಾಣಿಕೆಗಳೆಲ್ಲ, ಗುಂಡೂರಾವ್ ಸರಕಾರದ ವಿಕ್ರಮಗಳು. ರಾಜ್ಯದ ಸಂಪತ್ತನ್ನು ಲೂಟಿ ಮಾಡುವವರಿಗೆ ಎಲ್ಲ ರಕ್ಷಣೆ ಕೊಡಲಾಗಿದೆ.

ರೈತರೂ, ವಿದ್ಯಾರ್ಥಿಗಳೂ ಕಾರ್ಮಿಕರೂ ನ್ಯಾಯಯುತ ಬೇಡಿಕೆಗಳನ್ನು ಬೇಡಿದಾಗ ಅವರಿಗೆ ಸರಕಾರ ಕೊಟ್ಟಿದ್ದು ಗುಂಡೇಟು, ಲಾಠಿ ಚಾರ್ಜು, ಸೆರೆಮನೆವಾಸ.

ಬರಗಾಲ ನಿವಾರಣೆಗೆ ಶಾಶ್ವತವಾದ ಪರಿಹಾರದ ಆಶ್ವಾಸನೆಗಳು ಬರಡಾದವು. ಪ್ರತಿಬಂಧಕಾಜ್ಞೆಗಳ ಮೂಲಕ ನಾಗರೀಕ ಹಕ್ಕುಗಳನ್ನು ಸಂಪೂರ್ಣ ನಿರಾಕರಿಸಲಾಗಿದೆ. ಬೆಳೆಯುತ್ತಿರುವ ರೈತ-ಕಾರ್ಮಿಕರ ಹೋರಾಟಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಗುಂಡೂರಾವ್ ಸರ್ಕಾರ ಸರ್ಕಾರದ ಹಣದಿಂದಲೇ ಕೋಮುವಾರು ಸಮ್ಮೇಳನಗಳನ್ನು ಸಂಘಟಿಸುತ್ತಿದೆ. ಕ್ಯಾಪಿಟೇಶನ್ ಫೀ ವಸೂಲಿಗೆ ಮುಕ್ತದ್ವಾರ ಮಾಡಿಕೊಟ್ಟಿದೆ. ದರೋಡೆ, ಕಳ್ಳತನ,

ಮಾನಭಂಗ ಇತ್ಯಾದಿಗಳು ಲಂಗುಲಗಾಮಿಲ್ಲದೆ ನಡೆದಿವೆ.

ಕೃಷಿ ಕೂಲಿಗಾರರ, ಹರಿಜನ-ಗಿರಿಜನರ ಸ್ಥಿತಿಗಳನ್ನು ಸಂಪೂರ್ಣ ಕಡೆಗಣಿಸಲಾಗಿದೆ. ಭೂಮಿ ಹಂಚುವ ಕಾರ್ಯ ಭರವಸೆಯಲ್ಲೇ ಉಳಿದಿದೆ. ಭೂನ್ಯಾಯ ಮಂಡಲಿಗಳ ತೀರ್ಪಿನಿಂದಾಗಿ ರೈತರು ಕೋರ್ಟುಗಳ ಆಶ್ರಯ ಪಡೆಯುವಂತಾಗಿದೆ. ಜೀತದಾಳುಗಳ ವಿಮೋಚನೆ, ಪುನರ್ವಸತಿ ಕನಸಿನ ಮಾತಾಗಿದೆ.

ಪತ್ರಿಕೆಗಳ ಮೇಲೆ ದಾಳಿ ನಡೆಯಿತು. ಪತ್ರಿಕಾ ಸ್ವಾತಂತ್ರ್ಯವನ್ನೇ ಮೊಟಕುಗೊಳಿಸುವ ಬೆದರಿಕೆ ಹಾಕಲಾಯಿತು.

ಚುನಾವಣಾ ಘೋಷಣೆ

ನೀರಿನ ತೆರಿಗೆ, ಅಭಿವೃದ್ಧಿ ಕರ ವಿನಾಯಿತಿ ಮುಂತಾದ ಬೇಡಿಕೆಗಳ ಸಲುವಾಗಿ 1980 ಜೂನ್ ತಿಂಗಳಲ್ಲಿ ನರಗುಂದ-ನವಲಗುಂದ ಪ್ರದೇಶದಲ್ಲಿ ರೈತರ ಮೇಲಾದ ಗೋಳೀಬಾರಿನ ಸುರಿಮಳೆ ಅನಂತರ ರಾಜ್ಯಾದ್ಯಂತ ಹಲವಾರು ಕಡೆಗಳಲ್ಲಿ ಇದು ಮುಂದುವರಿದು ಈಚೆಗೆ ಗೆಜ್ಜಲಕೆರೆಯಲ್ಲಿ ಇಬ್ಬರು ರೈತರ ಆಹುತಿಯಲ್ಲಿ ಪರ್ಯವಸಾನಗೊಂಡಿದೆ. ಗೋಳೀಬಾರಿಗೆ ತುತ್ತಾದವರ ಸಂಖ್ಯೆ ನೂರಕ್ಕೂ ಮಿಕ್ಕಿದೆ. ಇಂಥ ಮಹತ್ಸಾಧನೆಗಳ ಪಟ್ಟಿಗೆ ಕೊನೆಯೇ ಇಲ್ಲ.

ಇದಲ್ಲದೇ ರಾಯರ ಸರಕಾರ ಭ್ರಷ್ಟಾಚಾರದ ದಾಖಲೆಯನ್ನೇ ಸೃಷ್ಟಿಸಿದೆ. ಹಲವಾರು ಆಪಾದನೆಗಳಲ್ಲಿ ಪಾಲ್ಗೊಂಡಿದ್ದ ಸಿ. ಎಂ. ಇಬ್ರಾಹಿಂ, ರೇಣುಕಾ ರಾಜೇಂದ್ರನ್ ಇವರುಗಳು ಜನರ ತೀವ್ರ ಆಕ್ರೋಷಕ್ಕೆ ತುತ್ತಾಗಿ ರಾಜೀನಾಮೆ ಕೊಡಬೇಕಾಗಿ ಬಂದಿತು. ಸಂಪುಟದ ಇತರ ಮಂತ್ರಿಗಳೂ ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳಲ್ಲಿ ಮುಳುಗೇಳುತ್ತಿದ್ದಾರೆ. ಕೆಲವು ಆಪಾದನೆಗಳ ವಿಚಾರಣೆ ಪೂರೈಸಿದರೂ ವರದಿಯನ್ನು ಪ್ರಕಟಿಸಿಲ್ಲ. ಇದು ಗುಂಡೂರಾವ್ ಸರಕಾರದ ಕಾರ್ಯವೈಖರಿಗೆ ಸ್ಪಷ್ಟ ನಿದರ್ಶನ.

ವಿರೋಧ ಪಕ್ಷಗಳ ಐಕ್ಯತೆ

ಈ ಪರಿಸ್ಥಿತಿಗೆ ಪರಿಹಾರ ಮಾರ್ಗವಾಗಿ ಒಂದೆಡೆ ಇಂದಿರಾ ಗಾಂಧಿಯ ಸರ್ವಾಧಿಕಾರದ ವಿರುದ್ಧವಾಗಿ ದೇಶಾದ್ಯಂತ ವಿಶಾಲ ತಳಹದಿಯ ಪ್ರತಿರೋಧ ಬೆಳೆಸಬೇಕೆಂದೂ, ಇನ್ನೊಂದು ಕಡೆ ಜನತೆಯ ಪ್ರಶ್ನೆಗಳಿಗೆ ನ್ಯಾಯವಾದ ಪರಿಹಾರ ಕೊಡಿಸಲು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಸಂಘಟಿಸಿ ಸಂಯುಕ್ತ ಹೋರಾಟ ನಡೆಸಬೇಕೆಂದೂ ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಾರ್ಟಿ ಹೇಳುತ್ತಿದ್ದು ಅದರಂತೆ ಕಾರ್ಯಕ್ರಮ ಹಾಕಿಕೊಂಡು ಅದನ್ನು ಮುಂದುವರಿಸಲಾಗುತ್ತಿದೆ.

ಈ ದಿಸೆಯಲ್ಲಿ ದಿಲ್ಲಿಯಲ್ಲಿ ಸೇರಿದ್ದ ಆರು ವಿರೋಧ ಪಕ್ಷಗಳ ಜಂಟಿ ಸಮಾವೇಶ ಮತ್ತು ಅದರ ನಿರ್ಣಯದಂತೆ ದೇಶಾದ್ಯಂತವಾಗಿ ನಡೆದ ರೈತರ, ಕಾರ್ಮಿಕರ, ವಿದ್ಯಾರ್ಥಿಗಳ, ಯುವಜನರ ಹೋರಾಟ ಪ್ರದರ್ಶನಗಳು ಉಲ್ಲೇಖನೀಯವಾಗಿದೆ. ಅದರಂತೆಯೇ 1981 ಜೂನ್ ತಿಂಗಳಿನಲ್ಲಿ 8 ಕೇಂದ್ರ-ಕಾರ್ಮಿಕ ಸಂಘಟನೆಗಳ ಮತ್ತು 40 ಅಖಿಲ ಭಾರತ ಮಟ್ಟದ ಫೆಡರೇಷನ್‌ಗಳ ಜಂಟೀ ಸಮಾವೇಶ ನಡೆದು ಕಾರ್ಮಿಕರ, ರೈತರ, ಸಾರ್ವಜನಿಕ ಬೇಡಿಕೆಗಳಿಗಾಗಿ ಜಂಟೀ ಹೋರಾಟಗಳನ್ನು ನಡೆಸಿ 1982 ಜನವರಿ 19 ರಂದು ದೇಶಾದ್ಯಂತ ಮುಷ್ಕರ-ಬಂದ್ ಆಚರಿಸಲಾಯಿತು. ಈ ಮುನ್ನ 1981 ಮಾರ್ಚ್ 26 ರಂದು ದಿಲ್ಲಿಯಲ್ಲಿ ರೈತರ ಮಹಾಪ್ರದರ್ಶನ ಮತ್ತು 1981 ನವೆಂಬರ್ 23 ರಂದು ಕಾರ್ಮಿಕರ ಬೃಹತ್ ಮಹಾಪ್ರದರ್ಶನ, 1982 ಅಕ್ಟೋಬರ್ 4 ರಂದು ಲೋಕಸಭೆಯ ಮುಂದೆ ಆರು ಪಕ್ಷಗಳ ನೇತೃತ್ವದಲ್ಲಿ ಬೃಹತ್ ಯುದ್ಧ ವಿರೋಧಿ ಪ್ರದರ್ಶನ ನಡೆಸಲಾಯಿತು.

ಈ ರೀತಿ ಕಾಂಗ್ರೆಸ್ (ಐ) ಪಕ್ಷಕ್ಕೆ ಪರ್ಯಾಯವಾಗಿ ನಿರ್ದಿಷ್ಟ ಕಾರ್ಯಕ್ರಮಗಳನ್ನೊಳಗೊಂಡ ಎಡ ಮತ್ತು ಪ್ರಜಾಪ್ರಭುತ್ವರಂಗ ರಚಿಸಬಹುದೆಂಬ ವಿಶ್ವಾಸವನ್ನು ಜನರಲ್ಲುಂಟುಮಾಡಲು ನಮ್ಮ ಪಕ್ಷಕ್ಕೆ ಸಾಧ್ಯವಾಗಿದೆ.

ಅಂಥ ಪ್ರಯತ್ನದಿಂದಾಗಿಯೇ ಪಶ್ಚಿಮ ಬಂಗಾಲ, ತ್ರಿಪುರಗಳಲ್ಲಿ ಎಡರಂಗದ ಸರಕಾರಗಳನ್ನು ರಚಿಸಿ ಭದ್ರವಾಗುಳಿಸಲು ಸಾಧ್ಯವಾಗಿದೆ ಹಾಗೆಯೇ ಕೇರಳದಲ್ಲಿ ಎಡ ಮತ್ತು ಪ್ರಜಾಪ್ರಭುತ್ವರಂಗ ರಚಿಸಿ ಕಾಂಗ್ರೆ ಕೂಟವನ್ನು ಬಲವಾಗಿ ಎದುರಿಸಲು ಸಾಧ್ಯವಾಗಿದೆ. ಈ ಮೂರು ರಾಜ್ಯಗಳಲ್ಲಿಯ ನಮ್ಮ ಪಾರ್ಟಿ ಮುಖಂಡತ್ವದ ಎಡರಂಗ, ಎಡ ಪ್ರಜಾಪ್ರಭುತ್ವದ ರಂಗಗಳ ಕಾರ್ಯಗಳು ಜನಪ್ರಿಯವಾಗಿರುವುದು ಸರ್ವವಿದಿತ.

ರಾಜ್ಯದಲ್ಲಿ ನಮ್ಮ ಚಟುವಟಿಕೆ

ದೇಶದ ರಾಜಕೀಯದಲ್ಲಿ ನಮ್ಮ ಪಕ್ಷ ಅನುಸರಿಸಿಕೊಂಡು ಬಂದ ರಾಜಕೀಯ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನದಲ್ಲಿ ತರಲು, ವಿರೋಧ ಪಕ್ಷಗಳ ಐಕ್ಯತೆ ಸಾಧಿಸಲು, ಜಂಟೀ ಚಳುವಳಿ ನಡೆಸಲು, ಜನರ ಸಮಸ್ಯೆಗಳಿಗೆ ಜಂಟೀ ಹೋರಾಟದ ಮೂಲಕ ಪರಿಹಾರಗಳನ್ನೊದಗಿಸಲು ಪ್ರಯತ್ನ ಮಾಡಲಾಯಿತು.

ರಾಜ್ಯದ ಅಭಿವೃದ್ಧಿಗಾಗಿ, ಶಾಶ್ವತ ಬರಗಾಲ ನಿವಾರಣೆಗಾಗಿ, ಬರಗಾಲ ಪರಿಹಾರಕ್ಕಾಗಿ, ರೈತ ಬೆಳೆದ ಬೆಳೆಗಳಿಗೆ ನ್ಯಾಯ ಬೆಲೆ, ಸಾಲ ರದ್ದತಿ, ಅಭಿವೃದ್ಧಿ ಕರ, ನೀರಿನ ಕರಗಳ ರದ್ದತಿಗಳಿಗಾಗಿ, ಪಾರ್ಟಿ ಸ್ವತಂತ್ರವಾಗಿಯೂ ಮತ್ತು ಇತರ ಪಕ್ಷಗಳೊಡನೆ ಜಂಟೀ ಹೋರಾಟ ನಡೆಸಿತು. 1982 ಫೆಬ್ರವರಿ 5 ರಂದು ನರಗುಂದದಿಂದ ಹಾಗೆಯೇ ರಾಜ್ಯದ ಇತರ ಪ್ರದೇಶಗಳಿಂದ ಚರಿತ್ರಾರ್ಹವಾದ ರೈತರ ಜಾಥಾ ಏರ್ಪಡಿಸುವುದರಲ್ಲಿ ಪಾರ್ಟಿ ಪ್ರಮುಖ ಪಾತ್ರ ವಹಿಸಿತ್ತು.

ಜೀವನ ವೇತನ, ತುಟ್ಟಿಭತ್ತೆ, ಕೆಲಸದ ಭದ್ರತೆಗಳಿಗಾಗಿ ರಾಜ್ಯದಲ್ಲಿ ನಡೆದ ಎಲ್ಲ ಕಾರ್ಮಿಕರ (ಸಾರ್ವಜನಿಕ ಕ್ಷೇತ್ರದ ಕಾರ್ಮಿಕರನ್ನೊಳಗೊಂಡು) ನೌಕರರ ಹೋರಾಟಗಳಿಗೆ ಬೀಡಿ, ರೇಷ್ಮೆ, ನಗರಸಭೆ, ತೋಟ ಕೆಲಸಗಾರರ ಚಳವಳಿಗಳಿಗೂ, ಸರಕಾರಿ ನೌಕರದಾರರ, ಶಿಕ್ಷಕರ, ಸ್ಟೈಫೆಂಡರಿಗಳ, ವಿದ್ಯಾರ್ಥಿ-ಯುವಜನರ ಪ್ರತಿಯೊಂದು ಪ್ರಕ್ಷೋಭೆಗಳಿಗೂ ನಮ್ಮ ಪಾರ್ಟಿ ಕೆಲವೆಡೆ ಪ್ರತ್ಯಕ್ಷ ನೇತೃತ್ವ ನೀಡಿ, ಇತರ ಸಂದರ್ಭದಲ್ಲಿ ಸಂಪೂರ್ಣ ಬೆಂಬಲ ನೀಡಿದೆ.

ಕನ್ನಡವು ಎಲ್ಲ ಹಂತಗಳಲ್ಲೂ ಆಡಳಿತ ಭಾಷೆಯಾಗಬೇಕೆಂದು ನಮ್ಮ ಪಕ್ಷ ಪ್ರಚಾರ-ಪ್ರಕ್ಷೋಭೆ ಮಾಡುತ್ತಾ ಬಂದಿದೆ. ಅಲ್ಪ ಭಾಷಿಗರ ಮೂಲಭೂತ ಹಕ್ಕುಗಳಿಗೆ ಚ್ಯುತಿ ಬಾರದಂತೆ ಪ್ರತಿಪಾದಿಸಿದೆ.

ರೈತ-ಕಾರ್ಮಿಕರ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಡುತ್ತಿದ್ದಂತೆಯೇ ಅತ್ಯಾವಶ್ಯಕ ವಸ್ತುಗಳ ಬೆಲೆ ಇಳಿಸಿ, ಅಗ್ಗದರದ ಅಂಗಡಿಗಳ ಮೂಲಕ ಸರಿಯಾಗಿ ಆಹಾರಧಾನ್ಯ ವಿತರಣೆಯಾಗಬೇಕೆಂದೂ, ಜನರಿಗೆ ನೀರು, ಮನೆ ಮತ್ತಿನ್ನಿತರ ಸೌಕರ್ಯ ಒದಗಿಸಬೇಕೆಂದೂ ಪಾರ್ಟಿ ಹೋರಾಡುತ್ತಾ ಬಂದಿದೆ.

ಹೀಗೆ ಒಂದೆಡೆ ದುಡಿಯುವ ಜನವಿಭಾಗಗಳ ಸಂಘಟನೆ ಕಟ್ಟಿ ಅವರ ಆರ್ಥಿಕ ಪ್ರಶ್ನೆಗಳ ಕುರಿತು ಹೋರಾಟಗಳನ್ನು ನಡೆಸುತ್ತಿರುವಾಗಲೇ, ಜನಸಾಮಾನ್ಯರ ಮತ್ತು ನಾಗರೀಕರ ಮೇಲಾಗುತ್ತಿರುವ ಎಲ್ಲ ಅನ್ಯಾಯಗಳ ವಿರುದ್ಧ ಪ್ರತಿಭಟನೆ ನಡೆಸಿ ಪರಿಹಾರ ಒದಗಿಸಲು ಪ್ರಯತ್ನ ಮಾಡಲಾಗಿದೆ.

ಹೀಗೆ ಕರ್ನಾಟಕ ರಾಜ್ಯದ ರಾಜಕೀಯದಲ್ಲಿ, ರೈತ-ಕಾರ್ಮಿಕರ ಹೋರಾಟಗಳಲ್ಲಿ, ಸಾರ್ವಜನಿಕ ಚಟುವಟಿಕೆಗಳಲ್ಲಿ ಪಾರ್ಟಿ ನೇರವಾಗಿ ಪ್ರವೇಶಿಸಿದೆ. ಎಲ್ಲ ಜನ ವಿಭಾಗಗಳಲ್ಲಿ ಬೆಳೆಯುತ್ತಿರುವ ಅತೃಪ್ತಿಗೆ ಪರಿಹಾರ ಕೊಡಿಸಲು, ಐಕ್ಯ ಹೋರಾಟ ನಡೆಸುವ ಸಲುವಾಗಿ ಎಲ್ಲ ವಿರೋಧ ಪಕ್ಷಗಳನ್ನೂ, ಕಾರ್ಮಿಕ ಸಂಘಟನೆಗಳನ್ನೂ ಒಟ್ಟಿಗೆ ಸೇರಿಸಿ ರಾಜ್ಯಾದ್ಯಂತ ಪ್ರಕ್ಷೋಭೆ ಸಂಘಟಿಸುವುದರಲ್ಲಿ ಪಾರ್ಟಿ ಯಶಸ್ವಿಯಾಗಿದೆ.

ನಮ್ಮ ಕಾರ್ಯಕ್ರಮ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಅದರ ನೇತೃತ್ವದ ಎಲ್ಲಾ ಸಂಘ ಸಂಸ್ಥೆಗಳೂ ಮತ್ತು ಈ ಚುನಾವಣೆಯಲ್ಲಿ ಗೆದ್ದು ಬರುವ ನಮ್ಮ ಶಾಸಕರೂ ಕೆಳಗಿನ ಕಾರ್ಯಕ್ರಮಗಳ ಜಾರಿಗೆ ವಿಧಾನಸಭೆಯ ಒಳಗೂ ಹೊರಗೂ ಹೋರಾಟ ನಡೆಸುತ್ತೇವೆ.

ಕೃಷಿರಂಗ

** ಹಳ್ಳಿಗಾಡಿನ ಜನಜೀವನ ಸುಧಾರಿಸಬೇಕಾದರೆ, ಉತ್ಪಾದನೆ ಹೆಚ್ಚಾಗಬೇಕಾದರೆ, ಇನ್ನೂ ಭೂಸ್ವಾಮ್ಯ ಹಿಡಿತ ಕೆಲವೇ ಜನರ ಹಿಡಿತದಲ್ಲಿರುವುದರಿಂಧ ಉಳುವವನೇ ಭೂಮಿಯ ಒಡೆಯನನ್ನಾಗಿ ಮಾಡಲು ಭೂಸುಧಾರಣೆ ಕ್ರಮ ತುರ್ತಾಗಿ ಜಾರಿಗೆ ತರುವುದು. ಪಾಳೆಯಗಾರೀ ಅರೆ ಪಾಳೆಯಗಾರಿ ವ್ಯವಸ್ಥೆಯ ವಿರುದ್ಧ ತೀವ್ರ ಹೋರಾಟ ನಡೆಸುವುದು.

** ರೈತರ, ರೈತ ಸಂಘಗಳ ಪ್ರತಿನಿಧಿಗಳನ್ನೊಳಗೊಂಡ ಭೂನ್ಯಾಯ ಮಂಡಲಿಗಳನ್ನು ರಚಿಸಿ ಈಗಿರುವ ಭ್ರಷ್ಟ ಭೂನ್ಯಾಯ ಮಂಡಲಿಗಳಿಂದ ರೈತರಿಗಾಗಿರುವ ಅನ್ಯಾಯವನ್ನು ಸರಿಪಡಿಸಿ ನ್ಯಾಯ ದೊರಕಿಸಿಕೊಡುವುದು.

** ಹೆಚ್ಚುವರಿ ಭೂಮಿ ಮತ್ತು ಸರಕಾರಿ ಬಂಜರು ಭೂಮಿಯನ್ನು ಕೃಷಿ ಕೂಲಿಗಾರರಿಗೂ, ಬಡ ರೈತರಿಗೂ ಸಿಗುವಂತೆ ಮಾಡುವುದು, ಈ ಹಂಚಿಕೆಯಲ್ಲಿ ನಡೆಯುತ್ತಿರುವ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಕೊನೆಗೊಳಿಸಲು ಹೋರಾಡುವುದು. ಭೂಪರಿಮಿತಿ ಕಲಮುಗಳಲ್ಲಿ ತಿದ್ದುಪಡಿ ಮಾಡಿ ಬೇನಾಮಿ ಭೂಸ್ವಾಧೀನವನ್ನು ತೆಗೆದು ಹಾಕುವಂತೆ ಕ್ರಮ ವಹಿಸುವುದು.

** ರೈತರಿಗೆ ಅಗ್ಗದರದಿಂದ ರಾಸಾಯನಿಕ ಗೊಬ್ಬರ, ಬೀಜ, ಒಕ್ಕಲತನ ಸಾಧನೆಗಳು ದೊರೆಯುವಂತೆಯೂ, ಕಡಿಮೆ ಬಡ್ಡಿಯ ಸಾಲ ಸಿಗುವಂತೆಯೂ, ಸಣ್ಣ ಮತ್ತು ಮಧ್ಯಮ ದರ್ಜೆಯ ರೈತರ ಈಗಾಗಲೇ ಉಳಿದಿರುವ ಸಾಲಗಳ ರದ್ದತಿಯಾಗುವಂತೆಯೂ ಪ್ರಯತ್ನ ಮಾಡುವುದು.

** ರೈತರ ಬೆಳೆಗಳಿಗೆ ಕಟಾವು ನಡೆಯುವುದಕ್ಕೆ ಸಾಕಷ್ಟು ಮುಂಚೆಯೇ ನ್ಯಾಯವಾದ ಬೆಲೆಗಳನ್ನು ನಿಗದಿಪಡಿಸಿ ರೈತರಿಗೆ ಈ ಸೌಲಭ್ಯ ದೊರೆಯುವಂತೆ ಮಾರ್ಕೆಟಿಂಗ್ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವುದು.

** ರೈತರಿಗೆ ಹೊಸ ಬಾವಿ ತೋಡಲು, ಹಳೇ ಬಾವಿ ರಿಪೇರಿ ಮಾಡಲು ಸುಲಭ ಕಂತಿನ ಸಾಲ ವಿತರಣೆ ಮಾಡುವುದು.

** ಕೃಷಿ ಕೂಲಿಗಾರರಿಗೆ ಕನಿಷ್ಠ ಕೂಲಿ ಸಿಗುವಂತೆಯೂ, ವರ್ಷವಿಡೀ ಅವರಿಗೆ ಕೆಲಸ ಸಿಗುವಂತೆಯೂ ಪ್ರಯತ್ನಿಸುವುದು.

** ವಸತಿ ಹೀನರಿಗೆ ವಸತಿಯ ವ್ಯವಸ್ಥೆ, ಅರ್ಧ ಕಸಬುದಾರರಿಗೆ ಸಾಲದ ಸೌಲಭ್ಯ, ಹಳ್ಳಿಗಳಿಗೆ ರಸ್ತೆ, ಶಾಲೆಗಳ ಸೌಲಭ್ಯ ಒದಗಿಸುವುದು. ಹಾಗೆಯೇ ಅಗ್ಗದರದ ಅಂಗಡಿಗಳ ಮೂಲಕ ಆಹಾರ ಧಾನ್ಯ, ಸೀಮೆ ಎಣ್ಣೆ ಮೊದಲಾದ ಅವಶ್ಯಕತೆಗಳನ್ನು ಪೂರೈಸುವುದು. ಪೋಲೀಸರ, ಸರಕಾರಿ ಕಛೇರಿಗಳ ಕಿರುಕುಳ, ಭ್ರಷ್ಟಾಚಾರಗಳಿಂದ ರೈತರನ್ನು ರಕ್ಷಿಸುವುದು.

** ಸತತವಾಗಿ ಬರಗಾಲಪೀಡಿತ ಪ್ರದೇಶಗಳಲ್ಲಿ ಬರಗಾಲ ನಿವಾರಣಾ ಕಾರ್ಯಕ್ರಮಗಳನ್ನು ಶಾಶ್ವತ ನೆಲೆಯಲ್ಲಿ ಕೈಗೊಳ್ಳುವಂತೆ ಹೋರಾಡುವುದು.

** ಕೃಷ್ಣಾ, ಮಲಪ್ರಭಾ, ಕಪಿನಿ ಮೊದಲಾದ ನೀರಾವರಿ ಯೋಜನೆಗಳು ತೀವ್ರಗತಿಯಲ್ಲಿ ಪೂರ್ಣಗೊಂಡು ರೈತರಿಗೆ ನೀರಿನ ಸೌಲಭ್ಯ ಸಿಗುವಂತೆ ಹೋರಾಡುವುದು.

ಕಾರ್ಮಿಕರಂಗ

** ಕಾರ್ಮಿಕರ ಹಕ್ಕುಬಾಧ್ಯತೆಗಳನ್ನು ಮೊಟಕುಗೊಳಿಸುವ ಕಾರ್ಮಿಕ ಕಾಯಿದೆಗಳ ವಿರುದ್ಧ, ನ್ಯಾಯಯುತವಾದ ಕಾರ್ಮಿಕರ ಹೋರಾಟದಲ್ಲಿ ಪೋಲೀಸರ ಕೈವಾಡದ ವಿರುದ್ಧ ಹೋರಾಡುವುದು, ಕಾರ್ಮಿಕರ ಹೋರಾಟಗಳಿಗೆ ಬೆಂಬಲ ನೀಡಿ ಅವು ಸಫಲಗೊಳ್ಳುವಂತೆ ಮಾಡುವುದು.

** ರೂ. 500 ಕನಿಷ್ಟ ಕೂಲಿ, ನೌಕರಿ ಭದ್ರತೆಗಾಗಿ ಪ್ರಯತ್ನ ಮಾಡುವುದು. ಸಂಘಗಳನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಗುಪ್ತ ಮತದಾನ ಆಧಾರದಲ್ಲಿ ಸಂಘಗಳ ಮಾನ್ಯತೆ, ಲಾಕೌಟ್, ರಿಟ್ರೆಂಚ್‌ಮೆಂಟ್, ಲೇ-ಆಫ್ ಮತ್ತು ವಿಕ್ಟಿಮೈಜೇಶನ್ ವಿರುದ್ಧ ಹೋರಾಡುವುದು.

ವಿದ್ಯಾರ್ಥಿ, ಯುವಜನರಂಗ

** ಸರ್ವರಿಗೂ ಶಿಕ್ಷಣ ಕೊಡಿಸುವಂತೆ ಅದನ್ನು ಸಾಮೂಹಿಕಗೊಳಿಸಿ ಉಚಿತ ಶಿಕ್ಷಣ ನೀಡುವುದು. ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು: ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಣಗೊಳಿಸಿ, ಶಿಕ್ಷಕ-ಶಿಕ್ಷಕೇತರರಿಗೆ ಎಲ್ಲಾ ಹಕ್ಕು ನೀಡಿ, ಅವರು ವಿದ್ಯಾರ್ಥಿಗಳ ಜೊತೆಯಲ್ಲಿ ಶಿಕ್ಷಣ, ಶಿಕ್ಷಣ ಸಂಸ್ಥೆಗಳ ಆಡಳಿತ ವ್ಯವಸ್ಥೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು. ಶಿಕ್ಷಣ ಪದ್ಧತಿಯಲ್ಲಿ, ಶಿಕ್ಷಣ ಕೊಡುತ್ತಿರುವ ವಿಷಯಗಳಲ್ಲಿ ಬದಲಾವಣೆ ಮಾಡುವುದು. ಯುವಕರಿಗೆ ಉದ್ಯೋಗದ ವ್ಯವಸ್ಥೆ, ಉದ್ಯೋಗ ಸಿಗುವತನಕ ನಿರುದ್ಯೋಗ ಭತ್ತೆ ಸಿಗುವಂತೆ ಮಾಡುವುದು. ನೌಕರಿ ಕೊಡುವಾಗ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಇಲ್ಲದಂತೆ ಮಾಡುವುದು.

ಮಹಿಳಾರಂಗ

** ಮಹಿಳೆಯರಿಗೆ ಶಿಕ್ಷಣ-ನೌಕರಿಗಳಲ್ಲಿ ಹೆಚ್ಚು ಸೌಲಭ್ಯ ಸಿಗುವಂತೆ ಮಾಡುವುದು, ಅವರ ಮೇಲಾಗುತ್ತಿರುವ ಬಲಾತ್ಕಾರ-ಹಿಂಸಾಚಾರಗಳನ್ನು ತಡೆಗಟ್ಟಲು ಹೋರಾಡುವುದು. ವರದಕ್ಷಿಣೆ ಪದ್ಧತಿಯನ್ನು ವಿರೋಧಿಸಲು ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು.

(6ನೇ ಪುಟ ನೋಡಿ)

ಚುನಾವಣಾ ಘೋಷಣೆ

(5ನೇ ಪುಟದಿಂದ)

ಭಾಷೆ ಮತ್ತು ಸಾಂಸ್ಕೃತಿಕರಂಗ

** ಎಲ್ಲ ಹಂತಗಳಲ್ಲೂ ಕನ್ನಡವೇ ಆಡಳಿತ ಭಾಷೆಯಾಗುವಂತೆ ಮಾಡುವುದು.

** ಎಲ್ಲ ಭಾಷೆ ಮತ್ತು ಎಲ್ಲ ಸಂಸ್ಕೃತಿಗಳ ಬೆಳವಣಿಗೆಗೆ ಸಂಪೂರ್ಣ ಅವಕಾಶಕೊಟ್ಟು ಆದರಿಂದ ಭಾವೈಕ್ಯತೆ ಉಂಟಾಗುವಂತೆ ಮಾಡುವುದು. ಕೋಮುವಾದಿ, ಪ್ರತ್ಯೇಕತಾವಾದಿ ವಿಚಾರ, ಚಳುವಳಿಗಳನ್ನು ವಿರೋಧಿಸುವುದು.

ಅಭಿವೃದ್ಧಿ ರಂಗ

○ ಕೈಗಾರಿಕೆ, ವಿದ್ಯುಚ್ಛಕ್ತಿ, ನೀರಾವರಿ, ಹೊಸ ರೇಲ್ವೆ, ಬಂದರು ಮುಂತಾದ ಅಭಿವೃದ್ಧಿ ಯೋಜನೆಗಳು ನಿಶ್ಚಿತ ದೃಷ್ಟಿ ಕೋನವಿಲ್ಲದೆ ಕುಂಠಿತಗೊಂಡು ರಾಜ್ಯದ ಅಭಿವೃದ್ಧಿಗೆ ಆತಂಕಕಾರಿಯಾಗಿದೆ.

○ ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆ, ಕಾಳಿ ವಿದ್ಯುಚ್ಛಕ್ತಿ ಯೋಜನೆ, ವಿಜಯನಗರ ಉಕ್ಕು ಕಾರ್ಖಾನೆ, ಬೆಂಗಳೂರು-ಗುಂತಕಲ್, ಬೆಂಗಳೂರು-ಮಿರಜ್, ಗೋವ, ಹುಬ್ಬಳ್ಳಿ-ಸೋಲಾಪುರ ಮೊದಲಾದ ರೈಲ್ವೆ ಮಾರ್ಗಗಳ ಬ್ರಾಡ್‌ಗೇಜ್ ಪರಿವರ್ತನೆ, ಹೊಸ ರೈಲ್ವೆ ಮಾರ್ಗಗಳ ರಚನೆ, ದೊಡ್ಡ ಕೈಗಾರಿಕೆಗಳ ಸ್ಥಾಪನೆ, ಮಧ್ಯಮ ಮತ್ತು ಚಿಕ್ಕ ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹ ಇವುಗಳ ಅಭಾವದಿಂದ ರಾಜ್ಯ ಅಭಿವೃದ್ಧಿಯಾಗಲಾರದಾಗಿದೆ. ಮಲೆನಾಡು ಅಭಿವೃದ್ಧಿಯನ್ನು ಕೈಬಿಡಲಾಗಿದೆ. ಹೀಗಾಗಿ ರಾಜ್ಯದ ನೈಸರ್ಗಿಕ ಸಂಪತ್ತುಗಳನ್ನೆಲ್ಲ ಉಪಯೋಗ ಮಾಡಿಕೊಳ್ಳುವ ಯೋಜನೆಯನ್ನು ಸರಕಾರ ಕೈಗೊಂಡಿಲ್ಲ. ಇವೆಲ್ಲವುಗಳ ಸಲುವಾಗಿ ಪಾರ್ಟಿ ಹೋರಾಡುವುದು.

● ಇಷ್ಟೇ ಅಲ್ಲದೆ ಸಾರ್ವಜನಿಕರಿಗೆ ಅತ್ಯಾವಶ್ಯಕ ವಸ್ತುಗಳ ಪೂರೈಕೆ, ಯೋಗ್ಯ ಸಾರಿಗೆ ವ್ಯವಸ್ಥೆ, ನೀರು ಪೂರೈಕೆಗಳ ಸಲುವಾಗಿಯೂ, ಲಂಚಗುಳಿತನ, ಪೋಲೀಸ್ ಕೈವಾಡಗಳ ವಿರುದ್ಧವೂ ಹೋರಾಟ ಮಾಡಲಾಗುವುದು.

● ರೈತ, ಕಾರ್ಮಿಕ, ವಿದ್ಯಾರ್ಥಿ ಹಾಗೂ ಭಾಷಾ ಚಳುವಳಿಗಳಲ್ಲಿ ಹಾಕಲ್ಪಟ್ಟ ಪೋಲೀಸ್ ಮೊಕದ್ದಮೆಗಳನ್ನು ಹಿಂತೆಗೆಯುವಂತೆ ಒತ್ತಾಯಿಸಲಾಗುವುದು.

● ಸ್ಟೈಫೆಂಡರಿಗಳನ್ನು ಖಾಯಂ ಮಾಡಲು ಪ್ರಯತ್ನಿಸಲಾಗುವುದು.

● ಮುನಿಸಿಪಲ್ ಕಾರ್ಪೋರೇಷನ್, ನಗರಸಭೆಗಳ ಚುನಾವಣೆಗಳು ತುರ್ತಾಗಿ ನಡೆಸುವಂತೆ ಪ್ರಯತ್ನಿಸಲಾಗುವುದು.

○ ಸರಕಾರ ಹಾಗೆಯೇ ಸರಕಾರಿ ಪ್ರೇರಿತ ಸಂಘ-ಸಂಸ್ಥೆಗಳಲ್ಲಿಯ ಅನಾವಶ್ಯಕ ಖರ್ಚುಗಳನ್ನು ಮಿತಗೊಳಿಸಿ, ಆಡಳಿತೆಯಲ್ಲಿ ದಕ್ಷತೆ, ಸುಧಾರಣೆಗಳನ್ನುಂಟುಮಾಡಲು ಜನರ ಬೆಂಬಲದಿಂದ ಹೋರಾಡಲಾಗುವುದು.

○ ಹರಿಜನ-ಗಿರಿಜನರ ಹಾಗೆಯೇ ಇತರ ಅಲ್ಪ ಸಂಖ್ಯಾತರಿಗೆ ಎಲ್ಲ ಸೌಲಭ್ಯಗಳನ್ನು ಕೊಡಿಸಿ ಅವರ ಜೀವನಮಟ್ಟ ಎತ್ತರಿಸುವಂತೆ ಸರ್ವ ಪ್ರಯತ್ನ ಮಾಡಲಾಗುವುದು.

○ "ಕೂಲಿಗಾಗಿ ಕಾಳು" ಯೋಜನೆಯನ್ನು ಪುನರಾರಂಭಿಸಲು ಹೋರಾಡಲಾಗುವುದು.

● ರಾಜ್ಯಗಳಿಗೆ ಸಂಪೂರ್ಣ ಸ್ವಾಯತ್ತತೆ ಇಲ್ಲದಿರುವುದರಿಂದಲೇ ಹಲವಾರು ಯೋಜನೆಗಳನ್ನು ಕೈಬಿಡಬೇಕಾಗಿ ಬರುತ್ತಿದೆ. ಜನ ಹಿತದ ಸಲುವಾಗಿ ರಾಜ್ಯ ಸರಕಾರಗಳು ವಿಧಾನ ಸಭೆಗಳಲ್ಲಿ ಮಂಜೂರು ಮಾಡಿದ ಶಾಸನಗಳಿಗೆ ಕೇಂದ್ರ ಒಪ್ಪಿಗೆ ಕೊಡುತ್ತಿಲ್ಲ. ರಾಜ್ಯದ ಹೆಚ್ಚಿನ ಆರ್ಥಿಕ ಸಂಪತ್ತೆಲ್ಲ ಕೇಂದ್ರ ಕೈಸೇರುತ್ತಿರುವುದರಿಂದ ರಾಜ್ಯ ಸರಕಾರದ ಯೋಜನೆಗಳು ಕೈಗೂಡದಂತಾಗಿವೆ. ಕೇಂದ್ರ ಸರಕಾರದ ಆದೇಶದಂತೆ, ಅವರ ಮರ್ಜಿಗೆ ಒಳಪಟ್ಟು ರಾಜ್ಯ ಸರಕಾರಗಳು ತಮ್ಮ ಆಡಳಿತೆ ನಡೆಸಬೇಕಾಗಿದೆ. ಇದು ರಾಜ್ಯಗಳ ಸ್ವಾಯತ್ತತೆಗೆ ವಿರುದ್ಧವಾಗಿದೆ. ರಾಜ್ಯಗಳ ಅಭಿವೃದ್ಧಿಗೆ ಆತಂಕಕಾರಿಯಾಗಿದೆ. ಉದಾಹರಣೆಗೆ ವಿಜಯನಗರ ಉಕ್ಕಿನ ಕಾರ್ಖಾನೆ, ಕೃಷ್ಣಾ ಮೇಲ್ದಂಡೆ ಯೋಜನೆಗಳು.

● ರಾಜ್ಯಗಳ ಸ್ವಾಯತ್ತತೆಯು ಪ್ರಜಾಪ್ರಭುತ್ವಕ್ಕೆ ಅಗತ್ಯ. ಆದ್ದರಿಂದ ನಮ್ಮ ಪಾರ್ಟಿ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಸಿಗಬೇಕೆಂದು ಹೋರಾಡುತ್ತದೆ.

○ ನಮ್ಮ ರಾಜ್ಯದಲ್ಲಿ ಜನಜೀವನಕ್ಕೂ ಶಿಕ್ಷಣಕ್ಕೂ ಸಂಬಂಧ ಇಲ್ಲದಂತಾಗಿದೆ. ಆದ್ದರಿಂದ ಶಿಕ್ಷಣದಲ್ಲಿ ಯೋಗ್ಯ ಸುಧಾರಣೆ, ಕ್ಯಾಪಿಟೇಶನ್ ಫೀ ರದ್ದತಿಗಳ ಸಲುವಾಗಿ ಪಾರ್ಟಿ ಹೋರಾಡುತ್ತದೆ. ಜನಜೀವನದಲ್ಲಿ ಅತಿಯಾಗಿ ಬೇರೂರಿರುವ ಮೂಢ ನಂಬಿಕೆಗಳನ್ನು ತೊಡೆಯಲು ಅನುವಾಗುವಂತೆ ಮಕ್ಕಳಿಗೆ ಪ್ರಾರಂಭದಿಂದಲೇ ವೈಜ್ಞಾನಿಕ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕು.

● ಗುಂಡೂರಾವ್ ರಾಜ್ಯದಲ್ಲಿ ಮಾನವೀಯ ಮೌಲ್ಯಗಳೇ ಇಲ್ಲದಂತಾಗಿದೆ. ಗೋಳೀಬಾರು, ಲಾಠಿ ಚಾರ್ಜು ದಿನನಿತ್ಯದ ಘಟನೆಗಳಾಗಿವೆ. ಮಹಿಳೆಯರ ಮಾನಭಂಗ, ಹಗಲು ದರೋಡೆಗಳಿಗೆ ಮಿತಿ ಇಲ್ಲದಾಗಿದೆ. ಮೆರವಣಿಗೆ, ಮತಪ್ರದರ್ಶನ, ಮುಷ್ಕರಗಳ ಮೇಲಿನ ಪ್ರತಿಬಂಧ ಕಾಯಂ ಉಳಿದಿದೆ. ಆಳುವ ಪಕ್ಷವನ್ನು ದೂಷಿಸುವ ವಿರೋಧ ಪಕ್ಷಗಳನ್ನೆಲ್ಲ ಗುಂಡೂರಾವ್ ಅತ್ಯಂತ ಕೀಳ್ಮಟ್ಟದ ದೃಷ್ಟಿಯಲ್ಲಿ ನೋಡುತ್ತಿದ್ದಾರೆ. ಹೀಗಾಗಿ ನಮ್ಮ ರಾಜ್ಯದಲ್ಲಿ ಮಾನವೀಯ ಮೌಲ್ಯಗಳೇ ಇಲ್ಲದಂತಾಗಿದೆ. ಮಾನವೀಯ ಮೌಲ್ಯಗಳನ್ನು ರಕ್ಷಿಸಲು ಪಾರ್ಟಿ ದುಡಿಯುವುದು.

ಪಶ್ಚಿಮ ಬಂಗಾಳ, ತ್ರಿಪುರ, ಕೇರಳಗಳಲ್ಲಿ ನಮ್ಮ ಸಾಧನೆ

ರಾಜಕೀಯ ವಿಶ್ಲೇಷಣೆ ಮಾಡಿ, ಇಂದಿರಾ ಕಾಂಗ್ರೆಸ್ಸಿನ ಆರ್ಥಿಕ-ರಾಜಕೀಯ ನಿಲುಮೆಗಳ ವಿರುದ್ಧವಾಗಿ ಮತದಾನ ಮಾಡಬೇಕೆಂದು ಕೇಳಿಕೊಳ್ಳುವಾಗ, ನಮ್ಮ ಪಾರ್ಟಿಯ ನೇತೃತ್ವದಲ್ಲಿ ರಾಜ್ಯ ಆಳುತ್ತಿರುವ ಪಶ್ಚಿಮ ಬಂಗಾಳ, ತ್ರಿಪುರ ಸರಕಾರಗಳ ಹಾಗೆಯೇ 18 ತಿಂಗಳು ಕೇರಳದ ಆಡಳಿತೆಯ ಸಾಧನೆಗಳ ಪಕ್ಷಿ ನೋಟ ತಿಳಿಯುವುದು ಅಗತ್ಯವಾಗಿದೆ.

ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಮುಂತಾದ ಜನವಿಭಾಗ ಹೋರಾಟ ನಡೆಸುವಾಗ ಸಂಬಂಧಪಟ್ಟ ಸರಕಾರಿ ವಿಭಾಗಗಳೂ, ಮಂತ್ರಿಗಳೂ ಮಧ್ಯೆ ಪ್ರವೇಶಮಾಡಿ ಸೂಕ್ತ ಪರಿಹಾರಗಳನ್ನು ಕಂಡುಹಿಡಿಯಲು ಪ್ರಯತ್ನಿಸಲಾಗುತ್ತಿದೆ. ಪೋಲೀಸರು ಸಿಕ್ಕಲ್ಲೆಲ್ಲಾ ಮಧ್ಯ ಪ್ರವೇಶ ಮಾಡುವುದಿಲ್ಲ.

ನಿತ್ಯೋಪಯೋಗಿ ವಸ್ತುಗಳನ್ನು, ಅವಶ್ಯವಿದ್ದಲ್ಲಿ ಸರಕಾರದ ಧನ ಸಹಾಯದಿಂದ ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಸಾರ್ವಜನಿಕ ವಿತರಣಾ ಕೇಂದ್ರಗಳ ಮೂಲಕ ಜನತೆಗೆ ಒದಗಿಸಲಾಗುತ್ತಿದೆ. ಕೇರಳದಲ್ಲಿ ಇ. ಕೆ. ನಯನಾರ್ ಸರಕಾರ ಇದು ಸಾಧ್ಯವೆಂದು ತೋರಿಸಿಕೊಟ್ಟಿತ್ತು. ಓಣಂ, ಕ್ರಿಸ್‌ಮಸ್, ದೀಪಾವಳಿ ಹಬ್ಬಗಳ ಸಂದರ್ಭದಲ್ಲಿ ಸಹಸ್ರಗಟ್ಟಲೆ ನ್ಯಾಯಬೆಲೆ ಅಂಗಡಿಗಳ ಮೂಲಕ ಅಗತ್ಯ ವಸ್ತುಗಳನ್ನು ಅಗ್ಗದರದಲ್ಲಿ ಸರಬರಾಜು ಮಾಡಿ ಬೆಲೆಯೇರಿಕೆಯನ್ನು ತಡೆಗಟ್ಟಲಾಗಿತ್ತು.

"ಉಳುವವನೇ ಹೊಲದೊಡೆಯ" ಎಂಬ ರಾಷ್ಟ್ರೀಯ ಸ್ವಾತಂತ್ರ್ಯದ ವೇಳೆ ಕೊಟ್ಟ ಭರವಸೆಯನ್ನು ಪೂರೈಸುವ ದಿಕ್ಕಿನಲ್ಲಿ ಪಶ್ಚಿಮ ಬಂಗಾಳ ಮತ್ತು ತ್ರಿಪುರ ಸರಕಾರಗಳು ದೊಡ್ಡ ಹೆಜ್ಜೆಗಳನ್ನಿಟ್ಟು ಈ ಸರಕಾರಗಳು ಇಡೀ ದೇಶಕ್ಕೆ ಮಾದರಿಯಾಗಿವೆ. ಭೂಮಿ ಹಕ್ಕಿನ ದಾಖಲೆಗಳನ್ನು ಯಥಾರ್ಥ ದೃಷ್ಟಿಯಿಂದಲೂ ಉಳುವವನ ಸಹಾಯದಿಂದಲೂ ಸ್ಥಾಪಿಸುವ ಮೂಲಕ ಇದನ್ನು ಸಾಧಿಸಲಾಗಿದೆ.

"ಕೂಲಿಗಾಗಿ ಕಾಳು" ಯೋಜನೆಯನ್ನು ಯಶಸ್ವಿಯಾಗಿ ನಡೆಸುವ ಮೂಲಕ ದುಡಿಯುವವರ ಜೀವನ ಸುಧಾರಣೆಗೆ ಅಪಾರ ಸಹಾಯಮಾಡಿದೆ. ಕೃಷಿ ಕೂಲಿಗಾರರಿಗೆ ವೃದ್ಧಾಪ್ಯ ವೇತನ ನೀಡಿ ದೇಶದಲ್ಲೇ ಸಾಮಾಜಿಕ ನ್ಯಾಯ ದೊರಕಿಸುವಲ್ಲಿ ದಾಖಲು ಸ್ಥಾಪಿಸಿದೆ.

ನಿರುದ್ಯೋಗಿಗಳಿಗೆ ಮೂರು ವರ್ಷ ಕಾಲ ನಿರುದ್ಯೋಗ ವೇತನವಾಗಿ ತಿಂಗಳಿಗೆ ರೂ. 50 ಕೊಡಲಾಗುತ್ತಿದೆ. ಪ್ರತಿಯೊಂದು ಹಳ್ಳಿಯಲ್ಲೂ ಕುಡಿಯುವ ನೀರು, ಶಾಲೆ, ವಯಸ್ಕರ ಶಾಲೆಗಳನ್ನು ಈಗಾಗಲೇ ಏರ್ಪಾಡು ಮಾಡಿದ್ದಾರೆ.

ಜನತೆಯ ಚಳುವಳಿಗೆ ಈ ಸರಕಾರಗಳು ಬೆಂಬಲ ನೀಡುತ್ತಿವೆಯಷ್ಟೇ ಅಲ್ಲ ಸ್ವತಃ ಪಾಲ್ಗೊಳ್ಳುತ್ತಿವೆ.

ಪಶ್ಚಿಮ ಬಂಗಾಲ ಸರಕಾರ ವಿಧವೆಯರಿಗೆ ಪೆನ್‌ಶನ್ ನೀಡುವ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಪಶ್ಚಿಮ ಬಂಗಾಳ ಸರಕಾರವು 4 ಎಕ್ರೆ ನೀರಾವರಿ 6 ಎಕರೆ ಒಣಬೇಸಾಯ ಭೂಮಿಯ ಮೇಲಿನ ಎಲ್ಲಾ ರೀತಿಯ ತೆರಿಗೆಗಳನ್ನು ರದ್ದುಮಾಡಿದೆ.

ತ್ರಿಪುರ ಸರಕಾರವು ಗಿರಿಜನ ಕುಟುಂಬ ಒಂದಕ್ಕೆ 5 ಎಕರೆಯಷ್ಟು ಕೃಷಿ ಭೂಮಿಯನ್ನು ಕೊಟ್ಟು ಅವರಿಗೆ ಎಲ್ಲ ಜೀವನಾನುಕೂಲವನ್ನು ಒದಗಿಸಿದೆ. ಸಣ್ಣ ರೈತರ ಹಳೆಯ ಸಾಲವನ್ನು ರದ್ದುಮಾಡಿ ಕಡಿಮೆ ಬಡ್ಡಿದರದಲ್ಲಿ ಹೊಸ ಸಾಲವನ್ನು ಬ್ಯಾಂಕುಗಳಿಂದ ಕೊಡಿಸಲಾಗಿದೆ. ಕಂತುಗಳನ್ನು ಸಕಾಲದಲ್ಲಿ ಕಟ್ಟಲು ಸಾಧ್ಯವಾಗದಿದ್ದರೆ ಸರಕಾರವೇ ಬಡ್ಡಿ ತುಂಬುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಅಧಿಕಾರ ವಿಕೇಂದ್ರಿಕರಣ ಮಾಡಿ, ಗ್ರಾಮ ಪಂಚಾಯಿತಿ, ನಗರಸಭೆಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟು ವಿಕೇಂದ್ರಿಕರಣ ಜಾರಿಯಲ್ಲಿ ತರಲಾಗಿದೆ.

ಮತದಾರರಲ್ಲಿ ನಮ್ಮ ವಿನಂತಿ

ತಾನೆದುರಿಸುತ್ತಿರುವ ಅತಿ ತೀವ್ರವಾದ ಆರ್ಥಿಕ ಬಿಕ್ಕಟ್ಟಿನ ನಿವಾರಣೆಗೆ ಉಪಾಯ ಕಂಡುಹಿಡಿಯುವಲ್ಲಿ ವಿಫಲರಾದ ಅಮೇರಿಕದ ಸಾಮ್ರಾಜ್ಯಶಾಹಿಗಳು ಮೂರನೇ ಮಹಾ ಯುದ್ಧವನ್ನು ಜಗತ್ತಿನ ಜನರ ಮೇಲೆ ಹೇರುವ ಪ್ರಯತ್ನ ನಡೆಸಿದ್ದಾರೆ. ರಷ್ಯಾ ಮತ್ತಿನ್ನಿತರ ಸಮತಾವಾದಿ ದೇಶಗಳೂ, ಜಗತ್ತಿನ ಶಾಂತಿಪ್ರಿಯ ಜನತೆಯೂ ಯುದ್ಧದ ವಿರುದ್ಧ, ಶಾಂತಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯೂ ಶಾಂತಿ ಚಳುವಳಿಯ ಮುಂಚೂಣಿಯಲ್ಲಿದೆ. ಆದ್ದರಿಂದ ಮಾರ್ಕ್ಸ್‌ವಾದಿ ಪಾರ್ಟಿಯ ಉಮೇದುವಾರರಿಗೆ ನೀವು ಕೊಡುವ ಮತವೆಂದರೆ ಶಾಂತಿಪಾಲನೆಗಾಗಿ ಕೊಡುವ ಮತವಾಗಿರುತ್ತದೆ.

1975 ರಿಂದ 77ರ ವರೆಗಿನ ಏಕ ವ್ಯಕ್ತಿ ಸರ್ವಾಧಿಕಾರದ ಕರಾಳಯಾತನೆಯನ್ನು ಕಂಡಿದ್ದೇವೆ. ಸರ್ವಾಧಿಕಾರದ ಆಳ್ವಿಕೆಯ ಕಾಲದಲ್ಲಿ ಅತಿ ಹೆಚ್ಚಿನ ಹಿಂಸಾಚಾರಕ್ಕೆ ಬಲಿಯಾದ ನಮ್ಮ ಪಾರ್ಟಿ ಸರ್ವಾಧಿಕಾರಿ ಆಡಳಿತೆಯನ್ನು ಸಂಪೂರ್ಣ ನಾಶಮಾಡಲು ಹೋರಾಡುತ್ತಿದ್ದೇವೆ. ನೀವು ಸಿ.ಪಿ.ಐ (ಎಂ) ಗೆ ನೀಡುವ ಮತ ಸರ್ವಾಧಿಕಾರದ ವಿರುದ್ಧ ನೀಡುವ ಮತವಾಗಿದೆ.

ಇಂದಿರಾ ಪಕ್ಷದ ಸರ್ವಾಧಿಕಾರಿ ಆಡಳಿತೆಯನ್ನೂ ಜನವಿರೋಧಿ ನೀತಿಯನ್ನೂ ದಬ್ಬಾಳಿಕೆಯನ್ನೂ ಕೊನೆಗೊಳಿಸಬೇಕಾದರೆ, ಬಲಿಷ್ಟವಾದ ವಿರೋಧ ಪಕ್ಷ ಅತ್ಯಗತ್ಯ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಿ, ಐಕ್ಯತೆ ಸಾಧಿಸಿ, ಸಂಯುಕ್ತ ಹೋರಾಟ ನಡೆಸುವುದರಲ್ಲಿ ನಮ್ಮ ಪಾರ್ಟಿ ಸ್ವಲ್ಪ ಜಯಗಳಿಸಿದೆ. ಎರಡು ರಾಜ್ಯಗಳಲ್ಲಿ ಎಡರಂಗ ಸರಕಾರಗಳನ್ನು ಭದ್ರಗೊಳಿಸಿದೆ. ಕೇರಳದಲ್ಲಿ ಬಲಿಷ್ಟವಾದ ಎಡ ಮತ್ತು ಪ್ರಜಾಪ್ರಭುತ್ವ ರಂಗವನ್ನು ಕಟ್ಟಿದೆ. ಆದ್ದರಿಂದ ನಮ್ಮ ಪಾರ್ಟಿಗೆ ನೀವು ಕೊಡುವ ಮತ ಎಡ ಮತ್ತು ಪ್ರಜಾಪ್ರಭುತ್ವರಂಗ ಕಟ್ಟಲು ನೀಡುವ ಮತವಾಗಿದೆ.

ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಲಂಚಗುಳಿತನ, ಮಂತ್ರಿಗಳ ಅಧಿಕಾರಿಗಳ ಕೈವಾಡ, ಪೋಲೀಸರ ದಬ್ಬಾಳಿಕೆಗಳನ್ನು ವಿರೋಧಿಸಲು,

ಕೃಷಿ ಕಾರ್ಮಿಕರಿಗೆ, ಬಡ ರೈತರಿಗೆ ಭೂಮಿ ಹಕ್ಕು ಪಡೆಯಲು, ಕೃಷಿ ಕಾರ್ಮಿಕರಿಗೆ ಮತ್ತು ಇತರ ಕೈಗಾರಿಕೆಗಳ ಕಾರ್ಮಿಕರಿಗೆ ಕನಿಷ್ಟ ವೇತನ ಸಿಗಲು, ರೈತರ ನ್ಯಾಯವಾದ ಬೇಡಿಕೆಗಳು ಮಂಜೂರಾಗಲು, ಅವರ ಮೇಲಿನ ಪೋಲೀಸ್ ಖಟ್ಲೆಗಳೆಲ್ಲ ವಾಪಸ್ಸಾಗಲು,

ಸ್ಟೈಫೆಂಡರಿಗಳ ನೌಕರಿ ಕಾಯಂ ಆಗಲು, ಕಾರ್ಮಿಕರಿಗೂ, ನೌಕರರಿಗೂ ತಮ್ಮ ಹೋರಾಟದಲ್ಲಿ ಸ್ಫೂರ್ತಿ, ಬೆಂಬಲ ಸಿಗಲು.

ಹರಿಜನ-ಗಿರಿಜನರಿಗೆ ಸರಿಯಾದ ಸ್ಥಾನ, ನ್ಯಾಯ, ಸೌಲತ್ತುಗಳು ಲಭ್ಯವಾಗಲು.

ಕ್ಯಾಪಿಟೇಶನ್ ಫೀ ರದ್ದಾಗಿ, ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಬಂದು ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ ಸಿಗಲು,

(7ನೇ ಪುಟ ನೋಡಿ)

ಚುನಾವಣೆ – ಜನತೆಯ ಮುಂದಿರುವ ಕರ್ತವ್ಯ

(3ನೇ ಪುಟದಿಂದ)

ಸ್ಥಾಪನೆ, ಆದಿವಾಸಿ ಭಾಷೆ ಕೋಕ್ ಬೋರಕ್‌ಗೆ ಮಾನ್ಯತೆ, ಆದಿವಾಸಿಗಳಿಂದ ಇತರರು ಪರಭಾರೆ ಪಡೆದ ಜಮೀನನ್ನು ಸಾಧ್ಯವಾದಷ್ಟು ಆದಿವಾಸಿಗಳಿಗೆ ಹಿಂದಿರುಗಿಸುವ ಆದಿವಾಸಿ ಜನತೆಯ ಬೇಡಿಕೆಗಳನ್ನು ಎಡರಂಗ ಸರಕಾರ ಪೂರೈಸಿತು. ಕೇಂದ್ರದಲ್ಲಿನ ಜನತಾ ಹಾಗೂ ಕಾಂಗ್ರೆಸ್ (ಐ) ನ ಎರಡೂ ಸರಕಾರಗಳು ಸಂವಿಧಾನದ ಆರನೇ ಷೆಡ್ಯೂಲಿನನ್ವಯ ಆದಿವಾಸಿ ಸ್ವಯಮಾಡಳಿತ ಜಿಲ್ಲಾ ಸಮಿತಿ ರಚನೆ ಬಗ್ಗೆ ಶಾಸನ ಮಾಡಲು ವಿರೋಧಿಸಿದ್ದರಿಂದಾಗಿ ಸಂವಿಧಾನದ ಏಳನೇ ಷೆಡ್ಯೂಲ್ ಪ್ರಕಾರ, ಅದರಲ್ಲಿ ಹಲವು ಮಿತಿಗಳಿದ್ದರೂ, ಈ ಶಾಸನವನ್ನು ರಾಜ್ಯ ಸರಕಾರ ಜ್ಯಾರಿಗೊಳಿಸಬೇಕಾಗಿ ಬಂತು.

ಎಡರಂಗ ಸರಕಾರದಡಿಯಲ್ಲಿ ದುರ್ಬಲ ವಿಭಾಗಗಳ ಮೇಲಿನ ತೆರಿಗೆ ಹಾಗೂ ಸಾಲದ ಹೊರೆಯನ್ನು ನಿವಾರಿಸಲಾಯಿತು; ಎಲ್ಲಾ ಹಂತಗಳಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಉಚಿತಗೊಳಿಸಲಾಯಿತು; ದಿನಗೂಲಿಗಳು ಹಾಗೂ ಕೃಷಿ ಕೂಲಿಕಾರರ ಕೂಲಿ ದರ ಹೆಚ್ಚಿಸಲಾಯಿತು. ಹಾಗೂ 'ಕೆಲಸಕ್ಕಾಗಿ ಆಹಾರ' ಕಾರ್ಯಕ್ರಮದಲ್ಲಿ ಅವರಿಗೆ ಸಾಕಷ್ಟು ಕೆಲಸ ಒದಗಿಸಲಾಯಿತು. ಗ್ರಾಮಾಂತರ ಬಡವರನ್ನು ಸಹಕಾರೀ ಸಂಘಗಳೆಡೆಗೆ ಸೆಳೆದು, ದುಬಾರಿ ಬಡ್ಡಿಯ ಲೇವಾದೇವಿಗಾರರು, ಅಪ್ರಾಮಾಣಿಕ ವ್ಯಾಪಾರಿಗಳು ಹಾಗೂ ಶೋಷಕ ಕಂಟ್ರಾಕ್ಟರುಗಳ ಹಿಡಿತವನ್ನು ನಿವಾರಿಸಲು ಯಶಸ್ವೀ ಪ್ರಯತ್ನ ನಡೆಸಲಾಯಿತು. ಎಲ್ಲಕ್ಕೂ ಮಿಗಿಲಾಗಿ ಸರಕಾರೀ ನೌಕರರು ಹಾಗೂ ಪೋಲೀಸ್ ಸಿಬ್ಬಂದಿಯೂ ಸೇರಿದಂತೆ ಎಲ್ಲರ ಪ್ರಜಾಸತ್ತಾತ್ಮಕ ಹಾಗೂ ಕಾರ್ಮಿಕ ಸಂಘಟನೆಯ ಹಕ್ಕುಗಳನ್ನು ಕಾಪಾಡಲಾಯಿತು. ಎಡರಂಗ ಸರಕಾರ ನಿಜವಾಗಿಯೂ ಜನಸಾಮಾನ್ಯರ ಹಿತಾಸಕ್ತಿ ಕಾಪಾಡುವ ಸಾಧನವಾಗಿ ಕಾರ್ಯನಿರ್ವಹಿಸಿತು.

ಸಿ. ಪಿ. ಐ. (ಎಂ) ಹಾಗೂ ಎಡರಂಗದ ಈ ಅತ್ಯುತ್ತಮ ದಾಖಲೆಗೆ ತದ್ವಿರುದ್ಧವಾಗಿ ರಾಜ್ಯದಲ್ಲಿ ಆಂತರಿಕ ಕಿತ್ತಾಟಗಳಿಂದ ನುಚ್ಚುನೂರಾಗಿರುವ ಕಾಂಗ್ರೆಸ್ [ಐ] ಟಿ.ಯು.ಜೆ.ಎಸ್., ಆಮ್ರ ಬಂಗಾಲೀ ಇತ್ಯಾದಿ ಎಲ್ಲಾ ವಿಚ್ಛಿದ್ರಕಾರೀ ಶಕ್ತಿಗಳೊಂದಿಗೆ ಶಾಮೀಲಾಗಿದೆ. ಆದಿವಾಸಿಗಳು ಹಾಗೂ ಬಂಗಾಲಿಗಳ ನಡುವಣ ಐಕ್ಯತೆ ರಕ್ಷಿಸಲು, ರಾಜ್ಯದಲ್ಲಿ ಪ್ರತ್ಯೇಕತಾವಾದೀ ಶಕ್ತಿಗಳು ತಲೆಯೆತ್ತದಂತೆ ಮಾಡಲು ಈ ಪ್ರತಿಕ್ರಿಯಾವಾದೀ ಕೂಟವನ್ನು ಸಂಪೂರ್ಣವಾಗಿ ಸೋಲಿಸಲೇಬೇಕು.

ಎಡರಂಗ ಮತ್ತೆ ಅಧಿಕಾರಕ್ಕೆ ಮರಳುವಂತಾದರೆ ಅದಕ್ಕೆ ಮತ್ತಷ್ಟು ಬಲಶಾಲಿಯಾದ ಹಾಗೂ ವ್ಯಾಪಕವಾದ ಅಧಿಕಾರ ಜನತೆ ನೀಡಿದರೆ, ಅದು ತ್ರಿಪುರಾದ ಜನತೆ ಈಗಾಗಲೇ ಗಳಿಸಿರುವುದನ್ನು ಉಳಿಸುತ್ತದೆ ಮಾತ್ರವಲ್ಲ ಅದನ್ನು ಮತ್ತಷ್ಟು ಮುಂದುವರಿಸುತ್ತದೆ. ತ್ರಿಪುರಾದಲ್ಲಿ ಎಡರಂಗಕ್ಕೆ ದೊರೆಯುವ ಭಾರೀ ವಿಜಯ ಕಳೆದ ಮೇ ತಿಂಗಳಲ್ಲಿ ಪಶ್ಚಿಮ ಬಂಗಾಳದ ಎಡರಂಗ ಗಳಿಸಿದ ಭಾರೀ ಜಯಭೇರಿಯನ್ನು ಮುಂದುವರೆಸಿ ಕಾಂಗ್ರೆಸ್ (ಐ)ನ ಸರ್ವಾಧಿಕಾರ ಹಾಗೂ ಜನವಿರೋಧೀ ಧೋರಣೆಗಳ ವಿರುದ್ಧ ಹೋರಾಡುತ್ತಿರುವ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳಿಗೆ ಮತ್ತಷ್ಟು ಬಲ ನೀಡುತ್ತದೆ. ಈ ಮಹಾನ್ ಗುರಿಯನ್ನು ಪ್ರಶಂಸಾತ್ಮಕ ರೀತಿಯಲ್ಲಿ ತ್ರಿಪುರಾದ ಜನತೆ ಸಾಧಿಸುತ್ತಾರೆಂಬ ಭರವಸೆ ಪೊಲಿಟ್‌ಬ್ಯೂರೋಗೆ ಇದೆ.

ಆಂಧ್ರ ಪ್ರದೇಶದಲ್ಲಿ ಯಾವಾಗಲೂ ಕಾಂಗ್ರೆಸ್ ಸರಕಾರಗಳೇ ಇದ್ದಿದ್ದು, ಜನತೆ ಕಾಂಗ್ರೆಸ್ ಆಳ್ವಿಕೆಯ ಎಲ್ಲಾ ದುಷ್ಪರಿಣಾಮಗಳನ್ನು ಅನುಭವಿಸಿದ್ದಾರೆ. ಆಳುವ ಪಕ್ಷ ಇಂದು ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ. ಕಳೆದ ಮೂರು ವರ್ಷಗಳಲ್ಲಿ ಕೇಂದ್ರವು ರಾಜ್ಯದ ಮೂರು ಮುಖ್ಯ ಮಂತ್ರಿಗಳನ್ನು ಬದಲಿಸಿದೆ. ಈಗ ಅಧಿಕಾರದಲ್ಲಿರುವ ನಾಲ್ಕನೇ ಮುಖ್ಯ ಮಂತ್ರಿಯೂ ಹಿಂದಿನ ಮುಖ್ಯ ಮಂತ್ರಿಗಳಷ್ಟೇ ಅಭದ್ರತೆಯ ಸ್ಥಿತಿಯಲ್ಲಿದ್ದಾರೆ. ಈ ರೀತಿ ಒಡಕಿನಲ್ಲಿರುವ ಕಾಂಗ್ರೆಸ್ (ಐ)ನ್ನು ಪದಚ್ಯುತಗೊಳಿಸುವ ಸಾಧ್ಯತೆ ಬಹಳ ಇದೆ.

ಆಂಧ್ರ ಪ್ರದೇಶದಲ್ಲಿ ಎಡ ಪಕ್ಷಗಳು, ವಿಶೇಷವಾಗಿ ಕಮ್ಯುನಿಸ್ಟ್ ಪಕ್ಷ ಅತೀ ಪ್ರಬಲ ವಿರೋಧೀ ಶಕ್ತಿಯ ಪರಂಪರೆ ಹೊಂದಿದೆ. ಕಮ್ಯುನಿಸ್ಟ್ ಚಳವಳಿಯಲ್ಲಿ ಎರಡು ವಿಭಜನೆಯಾದ ನಂತರ ರಾಜ್ಯದಲ್ಲಿ ಅದರ ಶಕ್ತಿ ತೀವ್ರ ಇಳಿಮುಖ ಪಡೆದಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಸಿ. ಪಿ. ಐ. (ಎಂ) ಹಾಗೂ ಸಿ. ಪಿ. ಐ. ಪರಸ್ಪರ ಹತ್ತಿರ ಬಂದು ಜನತೆಯ ಚಳವಳಿಗಳನ್ನು ಹಾಗೂ ಹೋರಾಟಗಳನ್ನು ಸಂಘಟಿಸುತ್ತಿವೆ. ಈ ಮುನ್ನಡೆಯನ್ನು ತಡೆಯಲು ಆಳುವ ಪಕ್ಷದ ಭೂಮಾಲಿಕರು ತಮ್ಮ ಬಾಡಿಗೆ ಗೂಂಡಾಗಳ ಜತೆ ನಕ್ಸಲೀಯರನ್ನೂ ಉಪಯೋಗಿಸುವ ಮಟ್ಟಕ್ಕೆ ಹೋಗಿದ್ದಾರೆ. ಸಿ. ಪಿ. ಐ (ಎಂ) ನ ಕಾರ್ಯಕರ್ತರನ್ನು ದೈಹಿಕವಾಗಿ ಮುಗಿಸಿಬಿಡಲು ಪ್ರಯತ್ನಿಸುತ್ತಿದ್ದಾರೆ. ಈ ಬೆದರಿಕೆಗಳನ್ನೆದುರಿಸಿ ರಾಜ್ಯದ ಹಲವು ಭಾಗಗಳಲ್ಲಿ ಸಿ. ಪಿ. ಐ. (ಎಂ) ಮುನ್ನಡೆ ಸಾಧಿಸಿದೆ. ಸಿ.ಪಿ.ಐ (ಎಂ) ಹಾಗೂ ಸಿ. ಪಿ. ಐ ಚುನಾವಣೆಯಲ್ಲಿ ಸ್ಪರ್ಧಿಸಬೇಕಾದ ಸ್ಥಾನಗಳ ಬಗ್ಗೆ ಅಗಲೇ ಒಂದು ಒಪ್ಪಂದಕ್ಕೆ ಬಂದಿವೆ. ಈ ಚುನಾವಣಾ ಒಪ್ಪಂದ ರಾಜ್ಯದ ಎಡ ಶಕ್ತಿಗಳು ಹಾಗೂ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಲಪಡಿಸಿವೆ.

ಹಿಂದೂ ಕೋಮುವಾದಿ ಬಿ. ಜೆ. ಪಿ. ಯೊಡನೆ ಯಾವುದೇ ಚುನಾವಣಾ ಮೈತ್ರಿ ಮಾಡಿಕೊಳ್ಳದಿದ್ದರೂ, ಇತರ ವಿರೋಧ ಪಕ್ಷಗಳೊಡನೆ ಎರಡೂ ಪಕ್ಷಗಳು ಮಾತುಕತೆ ಮುಂದುವರಿಸಿ, ಮತ ಹಂಚಿಹೋಗದಂತೆ ಮಾಡಲು ಪ್ರಯತ್ನಿಸುತ್ತಿವೆ. ಸಿ.ಪಿ.ಐ, (ಎಂ) ಹಾಗೂ ಸಿ. ಪಿ. ಐ. ಗಳೊಡನೆ ಚುನಾವಣಾ ಒಪ್ಪಂದ ಮಾಡಿಕೊಳ್ಳಬೇಕಾದ ಅವಶ್ಯಕತೆಯನ್ನು ಮನಗಂಡು ಕಾಂಗ್ರೆಸ್ (ಐ)ನ್ನು ಸೋಲಿಸುವ ಸಾಧ್ಯತೆಯನ್ನು ಒಂದು ವಾಸ್ತವ ಸಂಗತಿಯಾಗಿ ಮಾರ್ಪಡಿಸಲು ಈ ವಿರೋಧ ಪಕ್ಷಗಳು ಪ್ರಯತ್ನಿಸುತ್ತವೆಯೆಂದು ಪೊಲಿಟ್‌ಬ್ಯೂರೋ ಆಶಿಸುತ್ತದೆ. ಪ್ರಾದೇಶಿಕ ಪಕ್ಷವಾದ ತೆಲುಗು ದೇಶಂ ಚುನಾವಣಾ ಕಣಕ್ಕಿಳಿದಿದೆ. ಕಾಂಗ್ರೆಸ್ (ಐ) ವಿರುದ್ಧ ಹೋರಾಡಲು ಸಾಧ್ಯವಾದಷ್ಟು ಹೆಚ್ಚು ಶಕ್ತಿಗಳನ್ನು ಒಗ್ಗೂಡಿಸುವ ಕೆಲಸದಲ್ಲಿ ಈ ಪಕ್ಷ ಅಡ್ಡಿಯಾಗುವುದಿಲ್ಲವೆಂದು ಪೊಲಿಟ್‌ಬ್ಯೂರೋ ಆಶಿಸುತ್ತದೆ.

ಸದಾ ಕಾಂಗ್ರೆಸ್ [ಐ] ಆಳ್ವಿಕೆಯಲ್ಲಿದ್ದ ಕರ್ನಾಟಕದಲ್ಲಿ ಕೂಡಾ ಆಳುವ ಪಕ್ಷ ಈಗ ಹೋಳುಗೊಂಡಿರುವ ಮನೆ. ಕರ್ನಾಟಕದ ಕಾಂಗ್ರೆಸ್ [ಐ] ಮಂತ್ರಿ ಮಂಡಳ ಬಿಹಾರ, ಮಹಾರಾಷ್ಟ್ರ, ಆಂಧ್ರ ಪ್ರದೇಶದ ಮಂತ್ರಿ ಮಂಡಳಗಳೊಂದಿಗೆ ಭ್ರಷ್ಟಾಚಾರದ ವಿಷಯದಲ್ಲಿ ಸ್ಪರ್ಧೆಗೆ ನಿಲ್ಲುವಂತಿದೆ. ಇದುವರೆಗೆ ಭ್ರಷ್ಟ ಚಟುವಟಿಕೆಗಳಿಗಾಗಿ ಕನಿಷ್ಟ ಎರಡು ಮಂತ್ರಿಗಳನ್ನು ತೆಗೆದು ಹಾಕಬೇಕಾಗಿ ಬಂದಿದೆ. ಇನ್ನಷ್ಟು ಮಂತ್ರಿಗಳ ಮೇಲೆ ಭಷ್ಟಾಚಾರದ ಅಪಾದನೆಗಳಿವೆ. ಇದರಲ್ಲಿ ಮುಖ್ಯ ಮಂತ್ರಿಯವರೂ ಸೇರಿದ್ದಾರೆ.

ರಾಜ್ಯದಲ್ಲಿ ಎಡ ಶಕ್ತಿಗಳು ಇದುವರೆಗೆ ದುರ್ಬಲವಾಗಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಯೋಗ್ಯ ಬೆಲೆಗಾಗಿ ಬೆಟರ್‌ಮೆಂಟ್ ಲೆವಿ ವಿರುದ್ಧ ರೈತರ ಹೋರಾಟದಲ್ಲಿ, ವೇತನ ಪರಿಷ್ಕರಣಕ್ಕಾಗಿ ಸಾರ್ವಜನಿಕ ವಲಯದ ನೌಕರರ ಹೋರಾಟದಲ್ಲಿ ಎಡ ಶಕ್ತಿಗಳು ಮುಂಚೂಣಿಯಲ್ಲಿದ್ದವು. ರಾಜ್ಯದಲ್ಲಿ ಎಲ್ಲಾ ಎಡ ಶಕ್ತಿಗಳನ್ನು ಒಟ್ಟು ಸೇರಿಸಿ ಕರ್ನಾಟಕದಲ್ಲಿ ಎಡಶಕ್ತಿಗಳ ಬಲ ಹೆಚ್ಚಿಸಲು ಹಾಗೂ ಕಾಂಗ್ರೆಸ್ [ಐ]ನ ಬಲ ಕುಗ್ಗಿಸಲು ಸಿ.ಪಿ.ಐ [ಎಂ] ಹಾಗೂ ಸಿ.ಪಿ.ಐ. ಒಟ್ಟಾಗಿ ಚುನಾವಣೆಯಲ್ಲಿ ಹೋರಾಡಲಿವೆ. ಬಿ. ಜೆ. ಪಿ. ಯೊಂದಿಗೆ ಯಾವುದೇ ಚುನಾವಣಾ ರಂಗದ ಸಾಧ್ಯತೆಯನ್ನು ನಿರಾಕರಿಸುವುದರೊಂದಿಗೆ, ಜನತಾ, ಲೋಕದಳ, ಕ್ರಾಂತಿರಂಗ, ಕಾಂಗ್ರೆಸ್ [ಎಸ್] ಇತ್ಯಾದಿ ಪಕ್ಷಗಳು ಸಿ.ಪಿ.ಐ. [ಎಂ] ಹಾಗೂ ಸಿ. ಪಿ. ಐ. ನೊಂದಿಗೆ ಚುನಾವಣಾ ಒಪ್ಪಂದ ಮಾಡಿಕೊಂಡು ಕಾಂಗ್ರೆಸ್ [ಐ]ಗೆ ಸಾಧ್ಯವಾದಷ್ಟು ದೊಡ್ಡ ಪ್ರಮಾಣದ ಸೋಲುಣ್ಣಿಸಬೇಕಾದ ಅಗತ್ಯವನ್ನು ಅವು ಮನಗಾಣುತ್ತವೆ ಎಂದು ಪೊಲಿಟ್‌ಬ್ಯೂರೋ ಆಶಿಸುತ್ತದೆ.

ತ್ರಿಪುರಾದಲ್ಲಿ 1977ಕ್ಕಿಂತಲೂ ದೊಡ್ಡ ಪ್ರಮಾಣದ ಗೆಲುವು ಸಾಧಿಸುವ, ಇತರ ಎರಡು ರಾಜ್ಯಗಳಲ್ಲಿ ತನ್ನ ಹಾಗೂ ಇತರ ಎಡ ಶಕ್ತಿಗಳ ಸ್ಥಾನ ಹೆಚ್ಚಿಸಿ ಬಲಗೊಳಿಸುವ ಹಾಗೂ ಕಾಂಗ್ರೆಸ್ [ಐ] ನ್ನು, ವಿಶೇಷವಾಗಿ ಆಂಧ್ರ ಪ್ರದೇಶದಲ್ಲಿ ಪದಚ್ಯುತಗೊಳಿಸುವ ಸ್ಪಷ್ಟ ಉದ್ದೇಶವಿಟ್ಟುಕೊಂಡು ಸಿ. ಪಿ ಐ [ಎಂ] ಈ ಮೂರೂ ರಾಜ್ಯಗಳಲ್ಲಿ ಚುನಾವಣಾ ರಂಗಕ್ಕಿಳಿಯುತ್ತಿದೆ.

ಜನವರಿ 5 ಬಹಳ ಹತ್ತಿರದಲ್ಲೇ ಇದೆ; ಉಳಿದಿರುವ ಸಮಯ ಬಹಳ ಕಡಿಮೆ. ತ್ರಿಪುರಾ, ಆಂಧ್ರ ಪ್ರದೇಶ ಹಾಗೂ ಕರ್ನಾಟಕದಲ್ಲಿ ಸಿ.ಪಿ.ಐ. [ಎಂ[, ವಿಶೇಷವಾಗಿ ತ್ರಿಪುರಾದಲ್ಲಿ ಪಕ್ಷದ ಸಮಿತಿಗಳಿಗೆ ಚುನಾವಣಾ ಹೋರಾಟ ನಡೆಸಲು ಹಣಕಾಸಿನ ಹಾಗೂ ಇತರ ಸಹಾಯಬೇಕಾಗಿದೆ.

ದೇಶಾದ್ಯಂತ ಇರುವ ಪಕ್ಷದ ಸದಸ್ಯರು ಹಾಗೂ ಗೆಳೆಯರು, ಕಾಂಗ್ರೆಸ್ [ಐ] ಮೂರೂ ರಾಜ್ಯಗಳಲ್ಲಿ ಸೋಲಬೇಕೆಂದು ಆಶಿಸುವವರು, ತ್ರಿಪುರಾದಲ್ಲಿ ಎಡರಂಗ ಮತ್ತೆ ಅಧಿಕಾರಕ್ಕೆ ಬರಬೇಕು, ಹಾಗೂ ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ಎಡಶಕ್ತಿಗಳು ಬಲಗೊಳ್ಳಬೇಕು ಎಂದು ಬಯಸುವವರು, ಈ ಮೂರು ರಾಜ್ಯಗಳಲ್ಲಿ ನಮ್ಮ ಸಂಗಾತಿಗಳು ಎಂತಹ ಗಂಭೀರ ಹೋರಾಟದಲ್ಲಿ ತೊಡಗಿದ್ದಾರೆಂಬುದನ್ನು ತಿಳಿಯುವರೆಂಬ ಭರವಸೆ ಪೊಲಿಟ್‌ಬ್ಯೂರೋಗಿದೆ. ಅಧಿಕಾರ ಶಕ್ತಿ, ಗುತ್ತೇದಾರಿ ನಿಯಂತ್ರಣದಲ್ಲಿರುವ ಪ್ರಚಾರ ಮಾಧ್ಯಮ, ಪೋಲೀಸ್, ಗೂಂಡಾ ಬೆದರಿಕೆ ಇತ್ಯಾದಿ ಆಳುವ ಪಕ್ಷ ಅನುಸರಿಸಬಹುದಾದ ಅನೀತಿಮಾರ್ಗ ಇವೆಲ್ಲವನ್ನೂ ಅವರು ಎದುರಿಸಬೇಕಾಗಿದೆ. ನ್ಯಾಯ, ಅನ್ಯಾಯ ಇತ್ಯಾದಿ ವಿಧಾನಗಳಿಂದ ಕಾಂಗ್ರೆಸ್ (ಐ) ನಾಯಕರು ಸಂಗ್ರಹಿಸಿರುವ ಅಗಾಧ ಹಣ ಆ ಪಕ್ಷಕ್ಕೆ ಲಭ್ಯವಿದೆ. ಆದರೆ ಸಿ. ಪಿ ಐ (ಎಂ) ಜನಸಾಮಾನ್ಯರು ಕೊಟ್ಟ ಪೈಸೆ, ರೂಪಾಯಿಗಳನ್ನು ಅವಲಂಬಿಸಿರಬೇಕಾಗಿದೆ. ಆದ್ದರಿಂದ ಸಿ.ಪಿ.ಐ. [ಎಂ] ನ ಕೇಂದ್ರ ಚುನಾವಣಾ ನಿಧಿಗೆ ತಮ್ಮಿಂದ ಸಾಧ್ಯವಾದಷ್ಟನ್ನು ನೀಡಬೇಕೆಂದು ಇವರೆಲ್ಲರನ್ನು ಪೊಲಿಟ್‌ಬ್ಯೂರೋ ವಿನಂತಿಸಿಕೊಳ್ಳುತ್ತದೆ. ನಿಮ್ಮ ಗೆಳೆಯರಿಂದ ಸಾಧ್ಯವಿದ್ದಷ್ಟು ಸಂಗ್ರಹಿಸಿ, ನಿಮ್ಮ ಕೊಡುಗೆಯನ್ನು ಸಾಧ್ಯವಾದಷ್ಟು ಬೇಗನೇ ಈ ಕೆಳಗಿನ ವಿಳಾಸಕ್ಕೆ ಕಳಿಸಿ ;

ಕಾಮ್ರೇಡ್ ದೇಶರಾಜ್ ಚಡ್ಡಾ,
14, ಅಶೋಕ ರಸ್ತೆ
ನವದೆಹಲಿ-110 001.

ಚುನಾವಣಾ ಘೋಷಣೆ

(6ನೇ ಪುಟದಿಂದ)

ವಿಜಯನಗರ ಉಕ್ಕು ಕೈಗಾರಿಕೆ, ನೀರಾವರಿ ಯೋಜನೆಗಳು, ಕೈಗಾರಿಕೆಗಳ ಅಭಿವೃದ್ಧಿಯಾಗಲು, ರಾಜ್ಯದ ನೈಸರ್ಗಿಕ ಸಂಪತ್ತು ಸದ್ವಿನಿಯೋಗವಾಗಿ, ಕರ್ನಾಟಕ ರಾಜ್ಯದ ಸರ್ವತೋಮುಖ ಅಭಿವೃದ್ಧಿಯಾಗಲು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಗೆ ತಮ್ಮ ಅಮೂಲ್ಯವಾದ ಮತ ನೀಡಿ ಪ್ರಜಾಪ್ರಭುತ್ವದ ಉಳಿವಿಗೆ, ನಾಗರೀಕ ಹಕ್ಕುಗಳ ರಕ್ಷಣೆಗೆ, ಜಾತಿ ಸೌಹಾರ್ದತೆ ಕಾಪಾಡಲು ಸಹಾಯ ಮಾಡಿರಿ.

– ಸರ್ವಾಧಿಕಾರವನ್ನು ಸೋಲಿಸಿರಿ.

—ವಿರೋಧ ಪಕ್ಷಗಳ ಐಕ್ಯತೆ ಉಳಿಸಿರಿ.

– ಜಾತಿ, ಭಾಷೆಗಳ ಸೌಹಾರ್ದತೆ ಕಾಪಾಡಿರಿ.

– ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯನ್ನು ಗೆಲ್ಲಿಸಿರಿ.

ಮೂರ್ತೆದಾರರ ವಿಜಯ

ಮಂಗಳೂರು ತಾಲ್ಲೂಕು ಮತ್ತು ಬಂಟ್ವಾಳ ತಾಲ್ಲೂಕಿನ ಮೂರ್ತೆದಾರರು ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿತಗೊಂಡು ಕೆಲವು ಬೇಡಿಕೆಗಳನ್ನು ಮುಂದಿಟ್ಟು 30-11-82 ರಿಂದ ಹೋರಾಟ ನಡೆಸಿ, ಬೇಡಿಕೆಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. 2-12-82 ರಂದು ಮಂಗಳೂರು ಸರ್ಕಲ್‌ನ ಪೋಲಿಸ್ ಅಧಿಕಾರಿಗಳ ಸಮಕ್ಷಮದಲ್ಲಿ ಪಂಚಾಯಿತಿ ನಡೆದು ಒಪ್ಪಂದಕ್ಕೆ ಬರಲಾಯಿತು. ಲೀಟರ್ ಒಂದಕ್ಕೆ ಈಗ ಕೊಡುವ ದರಕ್ಕಿಂತ 15 ಪೈಸೆ ಮತ್ತು 20 ಪೈಸೆ ಹೆಚ್ಚಿಗೆ ಕೊಡಲು ಕಂಟ್ರಾಕ್ಟದಾರರು ಒಪ್ಪಿದ್ದರಿಂದ ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂತೆಗೆಯಲಾಯಿತು.

ಮುಷ್ಕರವನ್ನು ಮುರಿಯಲು ಕೆಲವು ದೊಡ್ಡ ಗುತ್ತಿಗೆದಾರರು ಮಾಡಿದ ಪ್ರಯತ್ನ ವಿಫಲವಾಗಿ, ಮಂಗಳೂರು ಮತ್ತು ಬಂಟ್ವಾಳ ತಾಲ್ಲೂಕಿನ ಗ್ರಾಮಗಳಲ್ಲಿ ಮುಷ್ಕರ ಯಶಸ್ವಿಯಾಗಿ ನಡೆಯಿತು.

ಈ ಮುಷ್ಕರವನ್ನು ಬೆಂಬಲಿಸಿದ ಮತ್ತು ಸಹಕಾರ ನೀಡಿದವರಿಗೆ ದ.ಕ. ಜಿಲ್ಲಾ ಮೂರ್ತೆದಾರರ ಸಂಘದ ಕಾರ್ಯದರ್ಶಿ ಕಾಂ| ಯು. ಬಿ. ಲೋಕಯ್ಯ ಕೃತಜ್ಞತೆ ಸೂಚಿಸಿದ್ದಾರೆ.

ಕಾಂಗ್ರೆಯನ್ನು ಸೋಲಿಸಿರಿ

(1ನೇ ಪುಟದಿಂದ)

ಕೊಳ್ಳುತ್ತಾರೆಷ್ಟೆ. ಆದರೆ ಕಾಂಗ್ರೆಯೊಳಗೆ ಗುಂಪುಗಳ ಚದುರಂಗದಾಟ ನಡೆಯುತ್ತಿರುವುದರಿಂದ ಸ್ವತಂತ್ರರಾಗಿ ಸ್ಪರ್ಧಿಸಿದವರು ಈಗಿನಿಂದಲೇ ಗುಂಡೂರಾಯರ ಕೃಪಾ ಕಟಾಕ್ಷಗಳಾದರೆ ಅವರಿಗೂ ಅಲ್ಪ ಕಾಣಿಗೆ ಸಿಗದಿರಲಾರದೆಂದು ಕಾಂಗ್ರೆ ಲಾಬಿಗಳಲ್ಲಿ ಗುಸುಗುಸು ಸುದ್ದಿ ಕೇಳಿ ಬರುತ್ತಿದೆ. ಪ್ರತಿಯೊಬ್ಬ ಸ್ಪರ್ಧಿಯ ಚುನಾವಣೆಯ ಖರ್ಚು ರೂ. 25 ಸಾವಿರಕ್ಕಿಂತ ಹೆಚ್ಚಾಗಬಾರದೆಂಬ ಚುನಾವಣೆ ಕಾಯಿದೆ ಸ್ಪಷ್ಟ ಹೇಳುತ್ತಿದ್ದರೂ ಪಾರ್ಟಿಯಿಂದ ರೂ. 2 ಲಕ್ಷ ಪಡೆದು ಹತ್ತೇ ಸಾವಿರ ಖರ್ಚು ಮಾಡಿ ಒಂದು ಲಕ್ಷ ತೊಂಭತ್ತು ಸಾವಿರ ಉಳಿಸುವ ಅಸಾಮಿಗಳೇ ಜಾಸ್ತಿ. ಯಾಕೆಂದರೆ ಕಾಂಗ್ರೆಗೆ ಮತ ಹಾಕುವವರೆಲ್ಲ ಸ್ಪರ್ಧಿ ಯಾರು ಎಂಬುದನ್ನು ತಿಳಿದುಕೊಂಡು ಮತ ಹಾಕುವುದಿಲ್ಲ. ಇಂದಿರಾ ಗಾಂಧಿಗೆ ಓಟು ಹಾಕುತ್ತಾರೆಂದು ಎಲ್ಲರಿಗೂ ಗೊತ್ತು. ಅಮ್ಮಾವ್ರ ಹೆಸರಲ್ಲಿ ಹೇಗೂ ಮತ ಸಿಗುತ್ತದೆ, ವಿನಾಕಾರಣ ಹಣ ಖರ್ಚು ಯಾಕೆ ಮಾಡುವುದೆಂದು ಉಳಿತಾಯ ಬಜೆಟ್ ಅನುಸರಿಸುವವರೇ ಕಾಂಗ್ರೆಯ್ಯಲ್ಲಿರುವವರು ಹೆಚ್ಚು ಜನ.

ರಾಜ್ಯದ ಹದಿನೈದು ಕ್ಷೇತ್ರಗಳಲ್ಲಿ ನೇರ ಸ್ಪರ್ಧೆ ಈ ಸಲದ ಚುನಾವಣೆಯಲ್ಲಿ ನಡೆಯಲಿದೆ. ಇತರೆಡೆ ಕೆಲವು ಕ್ಷೇತ್ರಗಳಲ್ಲಿ ಪ್ರಬಲ ವ್ಯಕ್ತಿಗಳು ಸ್ವತಂತ್ರವಾಗಿ ಸ್ಪರ್ಧಿಸುತ್ತಿದ್ದರೂ ಕೂಡ, ಹೆಚ್ಚಿನ ಸ್ವತಂತ್ರ ವ್ಯಕ್ತಿಗಳೆಲ್ಲ ನಾಲ್ಕು ಪಕ್ಷಗಳ ಐಕ್ಯತೆಗೆ ಅಡ್ಡಗಾಲು ಹಾಕಬಹುದು. ಕಾಂಗ್ರೆಗೆ ಸಹಾಯವಾಗಬಹುದು. ಆದ್ದರಿಂದ ಸ್ವತಂತ್ರ ವ್ಯಕ್ತಿಗಳನ್ನೆಲ್ಲ ಸಂಪೂರ್ಣ ಕೈಬಿಡಬೇಕೆಂದೂ, ಮತಗಳು ಹರಿದು ಹಂಚಿ ಹೋಗುವಂತೆ ಮಾಡಿ ಆಳುವ ಕಾಂಗ್ರೆಸ್ಸಿಗೆ ಸಹಾಯಮಾಡುವಂತಾಗಬಾರದೆಂದೂ ಮತದಾರರನ್ನು ಜಾಗೃತಿಗೊಳಿಸುವುದು, ಎಚ್ಚರಿಸುವುದು ಅತ್ಯಗತ್ಯ. ನಾಲ್ಕು ಪಕ್ಷಗಳ ಕಾರ್ಯಕರ್ತರು ಈ ಕೆಲಸವನ್ನು ಎಚ್ಚರಿಕೆಯಿಂದ ಕೈಗೊಳ್ಳಬೇಕು

ಎಂದಿಗೂ ಕಾಣದಂತ ಒಂದು ಹೊಸ ಘಟನೆ ಈ ಚುನಾವಣೆಯಲ್ಲಿ ನಡೆದಿರುವ ಸಂಗತಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಡಿ. ಐ. ಜಿ. (ಇಂಟೆಜಟನ್ಸಿ) ಕಾರ್ತಿಕೇಯನ್ ಇವರು ದಿಲ್ಲಿಯಲ್ಲಿ ಕಾಂಗ್ರೆ ಅಭ್ಯರ್ಥಿಗಳನ್ನು ಆರಿಸುವಾಗ ಪ್ರತಿಯೊಂದು ಅಭ್ಯರ್ಥಿಯ ಚರಿತ್ರೆ ವಿವರಿಸಿ, ಆಯ್ಕೆಯಲ್ಲಿ ನೇರವಾಗಿ ಕೈವಾಡ ನಡೆಸಿದ ಸಂಗತಿ. ಹಾಗೆಯೇ ರಾಜ್ಯಾದ್ಯಂತ ಬೇರೆ-ಬೇರೆ ಕ್ಷೇತ್ರಗಳಲ್ಲಿ ಅಧಿಕೃತ ಕಾಂಗ್ರೆ ಅಭ್ಯರ್ಥಿಗಳಲ್ಲದೆ ಬೇರೆ ಕಾಂಗ್ರೆ ಜನರು ಅರ್ಜಿ ಸಲ್ಲಿಸದಂತೆ ತಡೆಯಬೇಕೆಂದು ಜಿಲ್ಲೆಯ ಪೋಲೀಸ್ ಅಧಿಕಾರಿಗಳಿಗೆ ಕಳುಹಿಸಿರುವ ಆದೇಶ. ಇದು ಖಂಡನೀಯ. ಇದನ್ನೆಲ್ಲ ಮುಖ್ಯ ಮಂತ್ರಿ ಗುಂಡೂರಾಯರು ಒಪ್ಪಿಕೊಂಡಿದ್ದಾರೆ ಮಾತ್ರವಲ್ಲ, ಆ ರೀತಿ ಮಾಡುವುದರಲ್ಲಿ ತಪ್ಪೆನಿಲ್ಲವೆಂದೂ ಹೇಳಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳನ್ನು ಆರಿಸುವಾಗಲೂ ಪೋಲೀಸರ ಕೈವಾಡ, ಅಭ್ಯರ್ಥಿಗಳು ಅರ್ಜಿಸಲ್ಲಿಸುವಾಗಲೂ ಪೋಲೀಸರ ರಕ್ಷಣೆ, ಆದರೆ ರೈತರು-ಕಾರ್ಮಿಕರು ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ಮಾಡುವಾಗಲೂ ಪೋಲೀಸರ ಕೈಯ್ಯಲ್ಲಿರುವ ಬಂದೂಕಿನಿಂದ ಗೋಳೀಬಾರು-ಇದೆಲ್ಲ ಕಾಂಗ್ರೆ ಪಕ್ಷದ ನವೀನ ಕ್ರಮಗಳು ಹೊಸದಾಗಿ ಪ್ರಾರಂಭಿಸಲಾಗಿದೆ ಗುಂಡೂರಾವ್ ಮುಖಂಡತ್ವದಲ್ಲಿ.

ಗುಂಡೂರಾಯರು, ಕಾಂಗ್ರೆ ಮುಖಂಡರು ಈ ರೀತಿ ಪೋಲೀಸ್ ಅಧಿಕಾರಿಗಳ ಸಹಾಯದಿಂದ ಅಭ್ಯರ್ಥಿಗಳನ್ನು ಆರಿಸಿ, ಚುನಾವಣೆ ಪ್ರಚಾರ ಪ್ರಾರಂಭಿಸಿರುವಾಗ, ಜನತಾ ಪಕ್ಷ, ಕ್ರಾಂತಿರಂಗ, ಭಾರತ ಕಮ್ಯುನಿಸ್ಟ್ ಪಾರ್ಟಿ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಕಳೆದ ಮೂರು ವರ್ಷಗಳ ಗುಂಡೂರಾವ್ ಸರಕಾರದ ದಬ್ಬಾಳಿಕೆ, ಪೊಳ್ಳು ಆಶ್ವಾಸನೆ, ಗೋಳಿಬಾರುಗಳಿಂದ ಪಾಠ ಕಲಿತು, ಇವುಗಳ ವಿರುದ್ಧ ಜನತೆಯ ಐಕ್ಯ ಹೋರಾಟಗಳನ್ನು ನಡೆಸಿ ಅನುಭವ ಪಡೆದು ಇಂಥ ಸರಕಾರವನ್ನು ಅಧಿಕಾರದಿಂದ ಇಳಿಸಬೇಕು, ಕಾಂಗ್ರೆಯನ್ನು ಸೋಲಿಸಬೇಕೆಂಬ ದೃಢ ನಿರ್ಧಾರದಿಂದ ಒಗ್ಗಟ್ಟಾಗಿ ಚುನಾವಣೆ ನಡೆಸಬೇಕೆಂದು ನಿರ್ಧರಿಸಿರುವುದು ಅತ್ಯಂತ ಸ್ವಾಗತಾರ್ಹ. ಕರ್ನಾಟಕದ ಮತದಾರರೂ ವಿರೋಧ ಪಕ್ಷಗಳ ಇಂಗಿತವನ್ನೂ, ಅವರು ಕೈಗೊಂಡಿರುವ ಪ್ರಯತ್ನವನ್ನೂ, ಅವರ ದೃಢ ನಿರ್ಧಾರವನ್ನೂ ಮನದಟ್ಟುಮಾಡಿಕೊಂಡು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಹಾಗೆಯೇ ಸಿ.ಪಿ.ಐ, ಜನತಾ, ಕ್ರಾಂತಿರಂಗದ ಉಮೇದುವಾರರನ್ನೂ, ಹಾಗೆಯೇ ಮುಳುಬಾಗಲಿನಲ್ಲಿ 4 ವಿರೋಧ ಪಕ್ಷಗಳ ಅಧಿಕೃತ ಅಭ್ಯರ್ಥಿ ಆರ್. ವೆಂಕಟರಾಮಯ್ಯ ಅವರನ್ನೂ ಪ್ರಚಂಡ ಬಹುಮತದಿಂದ ಆರಿಸಿ ತರಬೇಕೆಂದು ವಿನಂತಿಮಾಡಿಕೊಳ್ಳುತ್ತಿದ್ದೇವೆ.

ರಾಯಚೂರು :

ಪಿ.ಡಬ್ಲ್ಯೂ.ಡಿ. ಕಾರ್ಮಿಕರಿಂದ ಬೇಡಿಕೆಗಳಿಗೆ ಒತ್ತಾಯ

ಕೆಲಸವನ್ನು ಕಾಯಂಗೊಳಿಸುವಂತೆ ಪಿ. ಡಬ್ಲ್ಯೂ. ಡಿ. ದಿನಗೂಲಿಗಳು ಅನೇಕ ದಿನಗಳಿಂದ ಒತ್ತಾಯಿಸುತ್ತಾ ಬಂದಿದ್ದರೂ ಯಾವುದೇ ಕ್ರಮವನ್ನು ಸರಕಾರ ಕೈಗೊಂಡಿಲ್ಲ. ರಾಯಚೂರು ವಿಭಾಗದ ದಿನ ಗೂಲಿಗಳು ಈ ಬೇಡಿಕೆಗೆ ಒತ್ತಾಯಿಸಿ ಅನೇಕ ಹೋರಾಟ ನಡೆಸಿದ್ದಾರೆ.

ಸುಳ್ಳು ಆಶ್ವಾಸನೆಗಳಿಂದ ವಂಚಿಸುತ್ತಾ ಬಂದಿರುವ ಸರಕಾರದ ಕ್ರಮವನ್ನು ಪ್ರತಿಭಟಿಸಿ ನವೆಂಬರ್ 29ರಂದು ಮಾನ್ವಿ, ದೇವದುರ್ಗ, ರಾಯಚೂರು, ಲಿಂಗಸೂರು ತಾಲ್ಲೂಕುಗಳ ದಿನಗೂಲಿಗಳು ರಾಯಚೂರಿನಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

○

ಕಲ್ಕತ್ತಾದಲ್ಲಿ ಮಾರ್ಕ್ಸ್-ಎಂಗೆಲ್ಸ್ ಪ್ರತಿಮೆ ಅನಾವರಣ

ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್‌ರ ಪೂರ್ಣಾಕೃತಿಯ ಪ್ರತಿಮೆಯೊಂದನ್ನು 6-12-82ರಂದು ಕಲ್ಕತ್ತಾದ ಸುರೇಂದ್ರನಾಥ್ ಪಾರ್ಕ್‌ನಲ್ಲಿ ಅನಾವರಣಗೊಳಿಸಲಾಯಿತು.

ಸಮಾಜವಾದೀ ದೇಶವಾದ ಜರ್ಮನ್ ಡೆಮೊಕ್ರಾಟಿಕ್ ರಿಪಬ್ಲಿಕ್ ಉಡುಗೊರೆಯಾಗಿ ನೀಡಿದ್ದ ಕಂಚಿನ ಪ್ರತಿಮೆಯನ್ನು ಕಲ್ಕತ್ತದ ಇಂಡೋ—ಜಿ ಡಿ. ಆರ್. ಸಮಿತಿಯು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಒಪ್ಪಿಸಿತ್ತು.

ಪ್ರತಿಮೆಯ ಉದ್ಘಾಟನಾ ಸಮಾರಂಭದಲ್ಲಿ ಸಿ ಪಿ ಐ. (ಎಂ) ನ ಪ್ರಧಾನ ಕಾರ್ಯದರ್ಶಿ ಕಾಂ। ಇ. ಎಂ. ಎಸ್. ನಂಬೂದ್ರಿಪಾದ್, ಸಿ. ಪಿ ಐ ನ ಪ್ರಧಾನ ಕಾರ್ಯದರ್ಶಿ ಕಾಂ। ಸಿ. ರಾಜೇಶ್ವರರಾವ್, ಆರ್.ಎಸ್.ಪಿ.ಯ ಚಿತ್ತಬಸು ಹಾಗೂ ಜಿ.ಡಿ.ಆರ್.ನ ರಾಯಭಾರಿ, ಸೋವಿಯತ್ ರಾಯಭಾರಿಗಳು ಭಾಗವಹಿಸಿದ್ದರು.

●

ಚುನಾವಣಾ ಘೋಷಣೆಯ ಬಿಡುಗಡೆ

ಈಗ ಕರ್ನಾಟಕ ರಾಜ್ಯದಲ್ಲಿ ಪ್ರಾರಂಭವಾಗಿರುವ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನಿಲುವು, ಗುಂಡೂರಾವ್ ಸರಕಾರದ ದುಷ್ಕರ್ಮಗಳು, ದಬ್ಬಾಳಿಕೆ, ಗೋಳಿಬಾರು, ರೈತ-ಕಾರ್ಮಿಕರ ಹೋರಾಟ, ಇನ್ನು ಮುಂದೆ ಪಾರ್ಟಿ ಯಾವ ಬೇಡಿಕೆಗಳ ಸಲುವಾಗಿ ಹೋರಾಡುತ್ತದೆ ಹಾಗೆಯೇ ಈ ಚುನಾವಣೆಯಲ್ಲಿ ಮತಗಳು ಹರಿದು ಹಂಚಿ ಹೋಗಬಾರದೆಂಬ ದೃಷ್ಟಿಯಿಂದ 4 ಪಕ್ಷಗಳೊಳಗೆ ಯಾವ ರೀತಿ ಹೊಂದಾಣಿಕೆ ಮಾಡಿಕೊಳ್ಳಬೇಕಾಯಿತು ಎಂಬ ಅಂಶಗಳನ್ನೊಳಗೊಂಡ ಚುನಾವಣಾ ಘೋಷಣೆಯನ್ನು ತಾ॥ 16 ರಂದು ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ। ಸೂರ್ಯನಾರಾಯಣರಾವ್ ಮತ್ತು ಎಸ್. ಕೆ. ಉಪಾಧ್ಯಾಯರು ಬಿಡುಗಡೆ ಮಾಡಿದರು. ಜನತಾ—ಕ್ರಾಂತಿರಂಗಗಳು ಸಿ.ಪಿ ಐ.—ಸಿ.ಪಿ.ಐ. (ಎಂ) ಜೊತೆಯಲ್ಲಿ ಈ ಚುನಾವಣೆಯಲ್ಲಿ ಕಾಂಗ್ರೆಯನ್ನು ಸೋಲಿಸಲು ಸಾಧ್ಯವಿದೆಯೆಂದು ಹೇಳಿ, ವಿರೋಧ ಪಕ್ಷಗಳ ಸರಕಾರ ಅಧಿಕಾರದಲ್ಲಿ ಬಂದರೂ ಕೂಡ ಜನತೆಯ, ರೈತ-ಕಾರ್ಮಿಕರ ಬೇಡಿಕೆಗಳ ಸಲುವಾಗಿ ಹೋರಾಟ ನಡೆಸಿಕೊಂಡು ಹೋಗುವುದು ಸಿ.ಪಿ. ಐ. (ಎಂ)ನ ಕರ್ತವ್ಯವೆಂದು ಹೇಳಿ, ಚುನಾವಣೆಯ ನಂತರವೂ 4 ಪಕ್ಷಗಳ ಐಕ್ಯತೆ ಮುಂದುವರಿಸಿಕೊಂಡು ಹೋಗಲಾಗುವುದೆಂದು ಹೇಳಿ, 4 ಪಕ್ಷಗಳ ಅಭ್ಯರ್ಥಿಗಳನ್ನೂ ಮತ್ತು 4 ಪಕ್ಷಗಳ ಬೆಂಬಲದಿಂದ ಸ್ಪರ್ಧಿಸುತ್ತಿರುವ ಮುಳುಬಾಗಲು ಕ್ಷೇತ್ರದ ಆರ್. ವೆಂಕಟರಾಮಯ್ಯನವರನ್ನು ಮತ ನೀಡಿ ಆರಿಸಿ ತರಬೇಕೆಂದು ಮತದಾರರಿಗೆ ವಿನಂತಿ ಮಾಡಿಕೊಂಡರು.

●

ಮುಂಬೈ ಕಾರ್ಮಿಕರ ಬೆಂಬಲಾರ್ಥ :

ಡಿಸೆಂಬರ್ ೨೧ ರಂದು ಅಖಿಲ ಭಾರತ ಹತ್ತಿ ಗಿರಣಿ ಕಾರ್ಮಿಕರ ಮುಷ್ಕರ

ಮುಂಬೈನ ಎರಡೂವರೆ ಲಕ್ಷ ಹತ್ತಿ ಗಿರಣಿ ಕಾರ್ಮಿಕರು ನಡೆಸುತ್ತಿರುವ ಮುಷ್ಕರ ಡಿಸೆಂಬರ್ 18ಕ್ಕೆ ತನ್ನ ಹನ್ನೊಂದು ತಿಂಗಳನ್ನು ಪೂರ್ಣಗೊಳಿಸುತ್ತದೆ. ಈ ದೀರ್ಘಕಾಲದ ಮುಷ್ಕರದಲ್ಲಿ ಎದುರಾದ ಎಲ್ಲಾ ಸಂಕಷ್ಟಗಳನ್ನು ಎದುರಿಸಿ ಅಸಾಧಾರಣ ಒಗ್ಗಟ್ಟನ್ನು, ದೃಢತೆಯನ್ನು ಮುಂಬೈ ಕಾರ್ಮಿಕರು ವ್ಯಕ್ತಪಡಿಸಿದ್ದಾರೆ.

ಇತರ ಉದ್ಯಮಗಳ ಹಾಗೂ ರಾಜ್ಯಗಳ ಕಾರ್ಮಿಕವರ್ಗ ಮುಂಬೈನ ಮುಷ್ಕರನಿರತ ಕಾರ್ಮಿಕರಿಗೆ ವಿವಿಧ ರೀತಿಯಲ್ಲಿ ತನ್ನ ಸೌಹಾರ್ದತೆ ಹಾಗೂ ನೆರವನ್ನು ನೀಡುತ್ತಾ ಬಂದಿದೆ. ಕಾರ್ಮಿಕ ಸಂಘಗಳ ರಾಷ್ಟ್ರೀಯ ಪ್ರಚಾರ ಸಮಿತಿಯು ಹೋರಾಟದಲ್ಲಿರುವ ಕಾರ್ಮಿಕರಿಗೆ ಸಂಪೂರ್ಣ ಸಹಾಯ ನೀಡುತ್ತಾ ಮಾತುಕತೆಯ ಮೂಲಕ ಒಂದು ನಿರ್ಧಾರಕ್ಕೆ ಬರಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ. ಆದರೆ ಸರ್ಕಾರವು ಜನತೆಗೆ ಆಗುತ್ತಿರುವ ತೊಂದರೆಗಳನ್ನು, ಉತ್ಪಾದನೆಯಲ್ಲಿ ಆಗುತ್ತಿರುವ ನಷ್ಟವನ್ನೂ ಲೆಕ್ಕಿಸದೆ ತೀರಾ ಬಿಗಿ ಧೋರಣೆ ಅನುಸರಿಸಿದೆ

ಈ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಚಾರ ಸಮಿತಿಯು ದೇಶಾದ್ಯಂತ ಇರುವ ಹತ್ತಿ ಗಿರಣಿ ಕಾರ್ಮಿಕರಿಗೆ, ಅವರ ಸಂಘಗಳು ಹಾಗೂ ಫೆಡರೇಶನ್‌ಗಳಿಗೆ, ಮುಂಬೈ ಕಾರ್ಮಿಕರಿಗೆ ಬೆಂಬಲಾರ್ಥವಾಗಿ ಡಿಸೆಂಬರ್ 21 ರಂದು ಒಂದು ದಿನದ ಸೌಹಾರ್ದ ಮುಷ್ಕರವನ್ನು ಆಚರಿಸಬೇಕೆಂದು ಕರೆ ನೀಡಿದೆ.

●

ಚುನಾವಣೆ ಕುರಿತು ರೇಡಿಯೋ ಭಾಷಣಗಳು

ಕಾಂ। ಎಸ್. ಕೆ. ಉಪಾಧ್ಯಾಯ	18-12-82 ಸಂಜೆ 7-45ಕ್ಕೆ
ಕಾಂ। ಎಸ್. ಸೂರ್ಯನಾರಾಯಣರಾವ್	25-12-82 ,,
ಕಾಂ। ಮಹಮ್ಮದ್ ಹಸನ್ ಖಾನ್	27-12-82 ರಾತ್ರಿ 8-15ಕ್ಕೆ
[ಟಿ ವಿ. ಪ್ರಸಾರ ಭಾಷಣ]	

●

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street, Sultanpet, B-560 053 Phone-24154, Prited at Ravee Traders, No. 8/1, J.M. Lane, Balepet Cross, Bangalore-560 053. EDITOR P. RAMACHANDRA RAO